

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

Volume : 07 | Issue : 255 | Saturday 21-06-2025 | E-mail : maruti.b.hosamani76@gmail.com | Page: 4 | Price : Rs. 1/-


## ನಿತ್ಯ ಯೋಗ ಸರಳತೆಯ ಸುಯೋಗ






ಯೋಗ ನಿತ್ಯ ಸುಯೋಗ
ಯೋಗ ತರುವುದು ನಿರಾಳತೆ
ಜ್ಞಾನಯೋಗ ಯೋಗ
ತರುವುದು ಸುಯೋಗ
ಯೋಗ ತನು ಮನದ ಶುದ್ಧತೆ
ಯೋಗ ಜೀವನದ ಬದ್ಧತೆ
ರಾಜಯೋಗ ಕರ್ಮಯೋಗ
ಜ್ಞಾನಯೋಗ ಭಕ್ತಿ ಯೋಗ
ಹಠಯೋಗ ಪಂಚಯೋಗ
ಸುಯೋಗ ಶುಭಯೋಗವು
ಸುಲಭ ಯೋಗ ತರುವುದು
ಉತ್ತಮ ಆರೋಗ್ಯಕರ ಜೀವನ
ಏಕಾಗ್ರತೆಯು ಆಧ್ಯಾತ್ಮಿಕ
ದೈಹಿಕ ಮಾನಸಿಕ ಆಂತರಿಕ
ಯೋಗದ ಶಕ್ತಿ ತನುಮನ ಗಟ್ಟಿ
ಸರಳ ಯೋಗಗಳು ನಿತ್ಯ ಇರಲಿ
ಆರೋಗ್ಯಕರ ಜೀವನದ ಜೋಪಾನ
ಯೋಗ ಕಲಿಸಿರಿ ಯೋಗ ಪಾಲಸಿರಿ
ಯೋಗದಿಂದ ರೋಗಗಳು ದೂರ
ಯೋಗದಿ ಅನುದಿನವು ಸುಖಕರ
ವಿಶ್ವದಲಿ ಯೋಗವು ಅತ್ಯದ್ಭುತ ಶಕ್ತಿ
ಮನುಕುಲದ ಜೀವನದ ನಿತ್ಯ ವರವು
ಯೋಗ ಬಾಳ ಪಯಣದ ನಿರಾಳತೆ
ನಿತ್ಯ ಯೋಗ ಸರಳತೆಯ ಸುಯೋಗ

–ಶ್ರೀದೇಶಂಸು
ಶ್ರೀಸುರೇಶ ಶಂಕ್ರೆಪ್ಪ ಅಂಗಡಿ
ದೇವರ ಹಿಪ್ಪರಗಿ

# ಅಂಡಮಾನ್‌ನಲ್ಲಿ ಕನ್ನಡ ಸಂಭ್ರಮೋತ್ಸವ

**ಸಿಹಿ ಕಹಿ ಸುದ್ದಿ,**
**ಅಂಡಮಾನ್ :** ಅಂಡಮಾನಿನ ಪೋರ್ಟ್ ಬ್ಲೇರ್ (ಶ್ರೀ ವಿಜಯಪುರಂ) ನಲ್ಲಿ ವಿಶ್ವ ಕನ್ನಡ ಕಲಾ ಸಂಸ್ಥೆ ಹಾಗೂ ಮನ್ವಂತರ ಮೀಡಿಯಾ ಇವರ ಸಂಯುಕ್ತ ಆಶ್ರಯದಲ್ಲಿ "ಕನ್ನಡ ಸಂಭ್ರಮೋತ್ಸವ" ಕಾರ್ಯಕ್ರಮ ಜರುಗಿತು. ಮನ್ವಂತರ ಮೀಡಿಯಾ ಅಕಾಡೆಮಿ ಅಧ್ಯಕ್ಷರಾದ ಕೆ.ಸಿ ವೇದಮೂರ್ತಿರವರು ಕನ್ನಡ ಸಂಭ್ರಮೋತ್ಸವ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿ "5,000 ವರ್ಷಗಳ ಹಿಂದೆ ನಮ್ಮ ಕನ್ನಡದಲ್ಲಿ ಜನಪದರ ಬಾಯಲ್ಲಿ ಬಂದಂತಹ ಕಾವ್ಯದಲ್ಲಿ ಬರುವಂತೆ...... "ಬೆಳಗಾಗಿ ನಾವೆದ್ದು ಯಾರ್ಯಾರ ನೆನೆಯಲಿ.....ಎಂಬ ಜಾನಪದ ನುಡಿಯಂತೆ "ಹೆತ್ತ ತಾಯಿಯ ಜೊತೆ ಭೂಮಿತಾಯಿಯನ್ನು ಯಾರ್ಯಾರು ಹೆಚ್ಚು ಮಹತ್ವ ಕೊಟ್ಟು ಗೌರವಿಸುತ್ತಾನೋ ಹಾಗೂ ಪ್ರೀತಿಸುತ್ತಾನೋ ಅವನು



ಸಮಾಜದಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸುತ್ತಾನೆ ಎಂದರು.
ವಿಶ್ವ ಕನ್ನಡ ಕಲಾ ಸಂಸ್ಥೆಯ ಸ್ಥಾಪಕರು ಹಾಗೂ ಅಧ್ಯಕ್ಷರು ಆದಂತಹ ರವೀಶ್ ಈ ಅಕ್ಕರ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ ಎಲ್ಲರೂ "ಶತ್ರುತ್ವವನ್ನು ತ್ಯಜಿಸಿ ಮಿತ್ರತ್ವದಿಂದ ಬಾಳೋಣ" "ಸ್ನೇಹ ನಮ್ಮ ಬಹುದೊಡ್ಡ ಆಸ್ತಿ" ಎಂದರು. ಕಾರ್ಯಕ್ರಮದ ಅತಿಥಿಗಳಾಗಿದ್ದ ಸಂಪಾದಕರಾದ ವೆಂಕಟಮುನಿ ರವರು ಸಾಹಿತ್ಯದ ಮಹತ್ವವನ್ನು ತಿಳಿಸಿದರು.
ಈ ಸಂದರ್ಭದಲ್ಲಿ ಕಿರುತೆರೆ ಕಲಾವಿದರಾದ ವಿದುಷಿ ಶೋಭಾ ಲೋಲನಾಥ್ ಮತ್ತು ಭರತನಾಟ್ಯ ಹಾಗೂ ಕಂಠದಾನ ಕಲಾವಿದರಾದ ದೇವುರೂಪಾಂತರ ಅವರು ಹಾಜರಿದ್ದರು. ಕಾರ್ಯಕ್ರಮವನ್ನು ಚಳ್ಳಕೆರೆಯ ವಿಜಯಾಗುರು ನಿರೂಪಿಸಿದರು.

**ವರದಿ–ಯತೀಶ್ ಎಂ ಸಿದ್ದಾಪುರ, ಚಳ್ಳಕೆರೆ.**

# ದಲಿತರು ಸಂಘಟಿತರಾಗಿ ಸೌಲಭ್ಯ ಪಡೆಯಿರಿ – ತರೀಕೆರೆ ಎನ್.ವೆಂಕಟೇಶ್.

**ಸಿಹಿ ಕಹಿ ಸುದ್ದಿ,**
**ನರಸಿಂಹರಾಜಪುರ :** ಮಹಿಳೆಯರ ಮಾನ ಉಳಿಸುವಂತಹ ಕೆಲಸ ಮಹಾತ್ಮಾ ಪ್ರೊ, ಬಿ.ಕೃಷ್ಣಪ್ಪ ನವರ ನೇತೃತ್ವದಲ್ಲಿ ದಲಿತ ಸಂಘರ್ಷ ಸಮಿತಿ ಹೋರಾಟ ಮಾಡಿ ಚಂದ್ರಗುತ್ತಿ ಜಾತ್ರೆಯಲ್ಲಿ ಮಹಿಳೆಯರ ಬೆತ್ತಲೆ ಸೇವೆ ನಿಲ್ಲಿಸಲಾಯಿತು ಎಂದು ಕ.ದ.ಸಂ.ಸ ರಾಜ್ಯ ಸಂಚಾಲಕರಾದ ತರೀಕೆರೆ ಎನ್.ವೆಂಕಟೇಶ್ ರವರು ಹೇಳಿದರು. ಅವರು ಇಂದು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಎನ್.ಆರ್ ಪುರ ತಾಲೂಕು ಸಮಿತಿ ಏರ್ಪಡಿಸಿದ್ದ ಸದಸ್ಯತ್ವ ನೋಂದಣಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ದಲಿತರು ಸಂಘಟಿ–ತರಾಗಬೇಕು ಸದಸ್ಯತ್ವಹೊಂದಬೇಕು ಎಂದು ಕರೆ ನೀಡಿದರು. ದಲಿತ





ಮಹಿಳಾ ಒಕ್ಕೂಟದ ರಾಜ್ಯ ಸಂಚಾಲಕಿಯಾದ ಎಂ.ವಿ ಭವಾನಿ ಮಾತನಾಡಿ ಮಹಿಳೆಯರು ತಮ್ಮ ಮಕ್ಕಳನ್ನು ವಿದ್ಯಾವಂತರಾಗಿಸಬೇಕು ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಅರಿವಿನೊಂದಿಗೆ ಜಾಗೃತ ರಾಗಬೇಕು ಎಂದು ಹೇಳಿದರು.
ಇದೇ ಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಯಾದ ವೇದಾರ ಬೀದಿಯ ಸಾಗರ್ ಬಿನ್ ಕಲ್ಲೇಶ್ ರವರನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ ಎನ್.ಆರ್ ಪುರ ತಾಲೂಕು ಸಮಿತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಜಿಲ್ಲಾ ಸಂಘಟನಾ ಸಂಚಾಲಕರಾದ ಮೃತ್ಯುಂಜಯ ಮಾತನಾಡಿ ಬಾಬಾ ಸಾಹೇಬ್ ಡಾ, ಬಿ.ಆರ್ ಅಂಬೇಡ್ಕರ್ ರವರ ವಿಚಾರಗಳನ್ನು ತಿಳಿಯಿರಿ, ಸಂವಿಧಾನವನ್ನು ಓದಿರಿ ಎಂದು ಹೇಳಿದರು. ಅಬ್ದುಲ್ ರೆಹಮಾನ್ ರವರು ತಾಲೂಕಿನಲ್ಲಿ ಕ.ದ.ಸಂ.ಸ ಸದಸ್ಯತ್ವ ನೋಂದಣಿಯ ಜವಾಬ್ದಾರಿಯನ್ನು ತೆಗೆದುಕೊಂಡರು. ರಾಜ್ಯ ಸಮಿತಿ ಸದಸ್ಯರಾದ ರಾಜೇಶ್ ರವರ ನೇತೃತ್ವದಲ್ಲಿ ಎನ್. ಆರ್ ಪುರ ತಾಲೂಕಿನ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.
ತಾಲೂಕು ಸಂಚಾಲಕರಾಗಿ ಸೀಜು. ಎಂ ಜೆ ರವರು ಹಾಗೂ ತಾಲೂಕು ಸಂಘಟನಾ ಸಂಚಾಲಕರಾಗಿ ಮುಳುವಳ್ಳಿ ಸಿದ್ದಪ್ಪ, ಇಳುವಳ್ಳಿ ರಾಜು, ರಾವೂರುರವಿ,ಪ್ರಭು,ಕುಮಾರ್,ಎನ್ ಆರ್ ಪುರ ಕಧೀರ್, ಕೆ ಕಣಬೂರು ಉಮೇಶ, ವೇದರ ಬೀದಿ ಕಲ್ಲೇಶ್ ಖಜಾಂಚಿಯಾಗಿ ಮೃತ್ಯುಂಜಯ ರವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಕರ್ನಾಟಕ ದಲಿತ ಮಹಿಳಾ ಒಕ್ಕೂಟದ ತಾಲೂಕು ಸಂಚಾಲಕಿಯಾಗಿ ರಾವೂರು ವಸಂತಿ ಹಾಗೂ ತಾಲೂಕು ಸಂಘಟನಾ ಸಂಚಾಲಕರಾಗಿ ಆರ್ ರೇಣುಕಾ,ಮಂಗಳ, ಎಲ್ ರೇಣುಕಾ, ಯಲ್ಲಮ್ಮ ರವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಹಾಗೂ ದಲಿತರ ಸಮಸ್ಯೆಗಳ ಬಗ್ಗೆ ಮತ್ತು ಮೀನುಗಾರರ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:**
**ಎನ್.ವೆಂಕಟೇಶ್ ತರೀಕೆರೆ.**
**ಚಿಕ್ಕಮಗಳೂರು**

# ಜನಮನದಲ್ಲಿ ಉಳಿಯುವದು ಶಿಕ್ಷಕ ವೃತ್ತಿ: ಮಕಾನದಾರ

**ಬಾಗಲಕೋಟ :** ಮಕ್ಕಳೊಂದಿಗೆ ಮಕ್ಕಳಾಗಿ ಆಡಿ ಹಾಡಿ ಕುಣಿದು ಕುಣಿಸಿ ಶಿಕ್ಷಣವಂತರನ್ನಾಗಿಸುವ ಶಿಕ್ಷಕ ಜನಮನದಲ್ಲಿ ಉಳಿಯುವದರಿಂದ ಶಿಕ್ಷಕರು ಸದಾ ಸ್ಮರಣೀಯರು ಎಂದು ಅಕ್ಷರ ದಾಸೋಹದ ಜಿಲ್ಲಾ ಸಮನ್ವಯಾಧಿಕಾರಿ ಆರ್.ಎಮ್.ಮಕಾನದಾರ್ ಹೇಳಿದರು.
ಅವರು ತಾಲ್ಲೂಕಿನ ಯಡಹಳ್ಳಿ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಮುಖ್ಯಗುರು ಆರ್.ಟಿ.ಬಾಳಕ್ಕನವರಅವರವಯೋನಿವೃತಿ ಬೀಳ್ಕೊಡುವ ಹಾಗೂ ಕಾರ್ಮಿಕ ಸ್ಮಾರ್ಟ್ ಕಾರ್ಡ ವಿತರಣಾ ಸಮಾರಂಭವನ್ನು ಉದ್ದೇಶಿಸಿ ಮಾತನಾಡುತ್ತ ಶಿಕ್ಷಕ ವೃತ್ತಿಯು ಪವಿತ್ರಕಾರ್ಯವಾಗಿದ್ದು ಇಂದು ಬೇರೆಬೇರೆ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವವರೆಲ್ಲ ಶಿಕ್ಷಕರಿಂದ ಶಿಕ್ಷಣ ಪಡೆದಾಗಲೇ ಸಾಧ್ಯವಾಗಿದೆ ಎಂದರು.
ಒಬ್ಬ ಇಂಜನೀಯರ್ ತಪ್ಪು ಮಾಡಿದರೆ ಒಂದು ಕಟ್ಟಡ ಹಾಳಾಗಬಹುದು ಒಬ್ಬ ಶಿಲ್ಪಿ ತಪ್ಪು ಮಾಡಿದರೆ ಒಂದು ವಿಗ್ರಹ ಹಾಳಾಗಬಹುದು ಆದರೆ ಒಬ್ಬ ಶಿಕ್ಷಕ ತಪ್ಪು ಮಾಡಿದರೆ ಶಾಲೆಯ ವಿದ್ಯಾರ್ಥಿಗಳ




ಜೀವನವೇ ಹಾಳಾಗುತ್ತದೆ ಎಂಬುದನ್ನು ಅರಿತು ಶಿಕ್ಷಕರು ಕಾರ್ಯನಿರ್ವಹಿಸಬೇಕು ಎಂದರು. ಈ ಎಲ್ಲ ವಿಷಯಗಳನ್ನು ಆರ್.ಟಿ.ಬಾಳಕ್ಕನವರ ಮನಗಂಡು ಇಂದು ಈ ಗ್ರಾಮದ ಎಲ್ಲರ. ಪ್ರೀತಿಗೆ ಪಾತ್ರರಾಗಿದ್ದಾರೆ ಎಂದರು.
ಗ್ರಾಮದಲ್ಲಿರುವ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ ವಿತರಿಸಿ ಮಾತನಾಡಿದ. ಜಿಲ್ಲಾ ಕಾರ್ಮಿಕ ಅಧಿಕಾರಿ ರಮೇಶ ಸುಂಬಡ ಗ್ರಾಮದಲ್ಲಿ ವಿವಿಧ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು ಸ್ಮಾರ್ಟ್ ಕಾರ್ಡ ಪಡೆದುಕೊಳ್ಳಬೇಕು ನೀವು ಜಿಲ್ಲಾ ಕೇಂದ್ರಕ್ಕೆ ಬಂದು ಕಾರ್ಡ ಮಾಡಿಸಿ ಕೊಳ್ಳಲು ಸಮಯ ಹಾಗೂ ಹಣ ಉಳಿತಾಯ ಮಾಡಿಕೊಡಲು ಇಂದು ನಿಮ್ಮ ಗ್ರಾಮದಲ್ಲಿಯೇ ಕಾರ್ಡ ವಿತರಿಸಲಾಗುತ್ತಿದ್ದು ಬಡಿಗ, ಕಮ್ಮಾರ, ಚಾಲಕ, ಹೊಟೇಲ್ ಸಿಬ್ಬಂದಿ ಸೇರಿದಂತೆ ವಿವಿಧ ಕಾರ್ಮಿಕರು ಇದರ ಪ್ರಯೋಜನ ಪಡೆದುಕೊಂಡು ತಮ್ಮ ಆಪತ್ಕಾಲದಲ್ಲಿ ಹಾಗೂ ತಮ್ಮ ಮಕ್ಕಳ ಶಿಕ್ಷಣಕ್ಕೆ ಇದು ಅನುಕೂಲವಾಗಲಿದೆ ಎಂದರು.
ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಉಪನಿರ್ದೇಶಕ ಎನ್.ಎಮ್.ಗೊರವರ ಮಾತನಾಡಿ ವಿದ್ಯಾರ್ಥಿ ಜೀವನವಾಗಲಿ ನೌಕರರಜೀವನವಾಗಲಿಕೂಡುವದುಆಕಸ್ಮಿಕ ಅಗಲುವದು ಅನಿವಾರ್ಯವಾಗಿದ್ದರೂ ಒಬ್ಬ ಶಿಕ್ಷಕ ಶಾಲೆ ಬಿಟ್ಟು ಹೋಗುವ ಸಮಯದಲ್ಲಿ ವಿದ್ಯಾರ್ಥಿ ಹಾಗೂ ಶಿಕ್ಷಕರ ನಡುವಿನ ಅಗಾಧ ಸಂಬಂಧದಿಂದ ಇಂದು ಅನೇಕ ವಿದ್ಯಾರ್ಥಿಗಳ ಕಣ್ಣಂಚಿನ ನೀರು ಮನಕಲಕುವಂತಿತ್ತು ಇದಕ್ಕೆ ಅವಿನಾಭಾವ ಸಂಬಂಧ ಎನ್ನುತ್ತಾರೆ. ಬಾಳಕ್ಕನವರ್ ಈ ಎಲ್ಲ ವಿದ್ಯಾರ್ಥಿಗಳ ಮನ ಗೆದ್ದಿದ್ದಾರೆ ಎಂದರು.
ಕಾರ್ಯಕ್ರಮದಲ್ಲಿ ಗ್ರಾ.ಪಂ.ಅಧ್ಯಕ್ಷೆ ಮಾಲಾ ಸಂಗಣ್ಣ ನಾಲತ್ವಾಡ, ಪ್ರೌಢಶಾಲಾ ಎಸ್.ಡಿ.ಎಂ.ಸಿ. ಅಧ್ಯಕ್ಷ ಮಂಜುನಾಥ ಮಾದರ, ಪ್ರಾಥಮಿಕ ಶಾಲಾ ಅಧ್ಯಕ್ಷ ಹನಮಂತ ಪಸಂದವರ್, ಗ್ರಾಮದ ನಿ.ಪ್ರಾಂಶುಪಾಲ. ಶಿವಶಂಕರ್ ಚೂರಿ, ಗ್ರಾ.ಪಂ.ಸದಸ್ಯರು, ಶಿಕ್ಷಣ ಇಲಾಖೆ ಸಿಬ್ಬಂದಿ, ತುಳಸಿಗಿರಿ ಬೇವಿನಮಟ್ಟಿ, ನವನಗರ, ವಿದ್ಯಾಗಿರಿಯ ಶಾಲಾ ಮುಖ್ಯಗುರುಗಳು ಸಹ ಶಿಕ್ಷಕರು ಉಪಸ್ಥಿತರಿದ್ದರು.
ಶಿಕ್ಷಕಿ ಸುಜಾತಾ ಬನಹಟ್ಟಿ ಸ್ವಾಗತಿಸಿದರು. ಶಿಕ್ಷಕ ಸುರೇಶ ತೋಟದ ಪ್ರಾಸ್ತಾವಿಕ ಮಾತನಾಡಿ ಕೊನೆಗೆ ವಂದಿಸಿದರು.

# ಮಕ್ಕಳಿಗೆ ಶಿಕ್ಷಣ, ಊಟ, ಆಟ ಮತ್ತು ಪೌಷ್ಟಿಕ ಆಹಾರ ಮುಖ್ಯ



**ರಬಕವಿ–ಬನಹಟ್ಟಿ:** ಇಂದಿನ ಮಕ್ಕಳಿಗೆ ಶಿಕ್ಷಣ, ಊಟ, ಆಟ ಮತ್ತು ಪೌಷ್ಟಿಕ ಆಹಾರ ಅತ್ಯಂತ ಮುಖ್ಯವಾಗಿದೆ. ಸಂವಿಧಾನದ ಪ್ರಕಾರ 6 ರಿಂದ 14 ವರ್ಷದ ಮಕ್ಕಳು ಯಾವುದೇ ಕಾರ್ಖಾನೆಗಳಲ್ಲಿ ಹಾಗೂ ಅಪಾಯಕಾರಿ ಸ್ಥಳಗಳಲ್ಲಿ ಕೆಲಸ ಮಾಡುವಂತಿಲ್ಲ.
ಎಲ್ಲಿಯಾದರೂ ಈ ವಯಸ್ಸಿನ ಬಾಲ ಕಾರ್ಮಿಕರು ಕಂಡು ಬಂದರೆ ತಮ್ಮ ಶಿಕ್ಷಕರಿಗೆ ಇಲ್ಲವೆ ಮನೆಯ ಹಿರಿಯರಿಗೆ ತಿಳಿಸಬೇಕು ಎಂದು ಇಲ್ಲಿನ ಕಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶೆ ಸೌಮ್ಯಾ ಹೂಲಿ ತಿಳಿಸಿದರು.
ಅವರು ಶನಿವಾರ ಸಮೀಪದ ಮದನಮಟ್ಟಿ ಗ್ರಾಮದ ಸರ್ಕಾರಿ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ನಡೆದ ವಿಶ್ವಬಾಲಕ ಕಾರ್ಮಿಕ ವಿರೋಧಿ ಅಂಗವಾಗಿ ಹಮ್ಮಿಕೊಂಡ ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.
ಸಂವಿಧಾನನಮಗೆಕಡ್ಡಾಯಶಿಕ್ಷಣದಹಕ್ಕನ್ನುನೀಡಿದೆ. ಆದ್ದರಿಂದ ಮಕ್ಕಳು ಶಿಕ್ಷಣವನ್ನು ಪಡೆದುಕೊಳ್ಳಬೇಕು. ಇಂದಿನ ಯುವಕರು ನಾಳಿನ ನಾಗರಿಕರು. ಆದ್ದರಿಂದ ಮುಂದಿನ ದಿನಗಳಲ್ಲಿ ಶ್ರೇಷ್ಠ ಭಾರತ ನಿರ್ಮಾಣಕ್ಕಾಗಿ ಮಕ್ಕಳು ಉತ್ತಮ ಶಿಕ್ಷಣ ಪಡೆದುಕೊಳ್ಳಬೇಕು ಎಂದು ನ್ಯಾಯಾಧೀಶೆ ಸೌಮ್ಯಾ ಹೂಲಿ ತಿಳಿಸಿದರು.
ಹಿರಿಯ ನ್ಯಾಯವಾದಿ ಎಂ. ಜಿ. ಕೆರೂರ ಮಾತನಾಡಿ, ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನದ ಮಹತ್ವ ಎಂದರೆ ಬಾಲ ಕಾರ್ಮಿಕ ಪದ್ಧತಿಗೆ ಗಮನ ನೀಡುವುದು ಮತ್ತು ಅದನ್ನು ನಿರ್ಮೂಲನೆ ಮಾಡುವ ಮಾರ್ಗಗಳನ್ನು ಕಂಡುಕೊಳ್ಳುವುದಾಗಿದೆ. ಬಾಲ ಕಾರ್ಮಿಕ ಪದ್ಧತಿಗೆ ಬಲವಂತವಾಗಿ ಬಲಿಯಾಗುವ ಮಕ್ಕಳು ಎದುರಿಸುವ ಹಾನಿಕಾರಕ ಮಾನಸಿಕ ಮತ್ತು ದೈಹಿಕಸಮಸ್ಯೆಗಳಬಗ್ಗೆಜಾಗೃತಿಮೂಡಿಸುವುದಾಗಿದೆ. ಇದರಲ್ಲಿ ಪ್ರತಿಯೊಬ್ಬರ ಜಾಗೃತಿ ಮುಖ್ಯವಾಗಿದೆ ಎಂದರು.
ಎಸ್. ಡಿ. ಎಂ. ಸಿ. ಅಧ್ಯಕ್ಷ ದಯಾನಂದ ಮಗದುಮ್ ಅಧ್ಯಕ್ಷತೆ ವಹಿಸಿದ್ದರು.
ಕಾರ್ಯಕ್ರಮದ ವೇದಿಕೆಯ ಮೇಲೆ ಸಹಾಯಕ ಸರ್ಕಾರಿ ಅಭಿಯೋಜಕಿ ಭವ್ಯ ಆರ್, ವಕೀಲ ಮಹೇಶ ಶಿಂಗೆ, ಮುಖ್ಯ ಶಿಕ್ಷಕ ಡಿ. ಬಿ. ಜಾಯಗೊಂಡ, ಶಿಕ್ಷಣ ಸಂಯೋಜಕ ಬಿ.ಎಂ. ಹಳೆಮನಿ. ಎ.ಎಸ್.ಐ. ಬಾಬಾನಗರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಶೈಕ್ಷಣಿಕ ಸಾಧನೆಗೆ ಯೋಗವೇ ಅಡಿಪಾಯ



**ಮಹಾಲಿಂಗಪುರ:** ಸಮೀಪದ ರನ್ನಬೆಳಗಲಿ ಪಟ್ಟಣದ ಸರ್ಕಾರಿಹೆಣ್ಣುಮಕ್ಕಳಹಿರಿಯಪ್ರಾಥಮಿಕಶಾಲೆಯಲ್ಲಿ ಶಾರದಾ ಮಾತಾ ಶಿಕ್ಷಣ ಮತ್ತು ಯೋಗಾಶ್ರಮ ಟ್ರಸ್ಟ್ (ರಿ) ರನ್ನ ಬೆಳಗಲಿ ಆಶ್ರಯದಲ್ಲಿ ಹನ್ನೊಂದನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಪೂರ್ವಭಾವಿಯಾಗಿ ಬಾಲಕಿಯರಿಗಾಗಿ ಸರಕಾರಿ ಹೆಣ್ಣು ಮಕ್ಕಳ ಶಾಲೆಯಲ್ಲಿ ಉಚಿತ ಯೋಗ ಶಿಬಿರ ಪ್ರಾರಂಭಗೊಂಡಿದೆ.
ಸಮೂಹ ಸಂಪನ್ಮೂಲ ವ್ಯಕ್ತಿ ಬಸವರಾಜ ಬಳ್ಳಾರಿ ಯೋಗಶಿಬಿರವನ್ನುಉದ್ಘಾಟಿಸಿಮಾತನಾಡಿದಅವರು ಶೈಕ್ಷಣಿಕ ಸಾಧನೆಗೆ ಯೋಗವೇ ಅಡಿಪಾಯವಾಗಿದೆ. ಇಂದಿನ ಒತ್ತಡದ ಜೀವನದಲ್ಲಿ ಯೋಗವನ್ನು ನಿತ್ಯ ಮೈಗೂಡಿಸಿಕೊಂಡರೆ,
ವಿದ್ಯಾರ್ಥಿ ಜೀವನದಲ್ಲಿ ಶೈಕ್ಷಣಿಕ ಸಾಧನೆ ಮಾಡಲು ಅನುಕೂಲವಾಗುತ್ತದೆ.
ಅತಿಥಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ರಾಘವೇಂದ್ರ ನೀಲಣ್ಣವರ ಯೋಗ ಗುರುಗಳು ಯೋಗದಲ್ಲಿ ಪಾಂಡಿತ್ಯವನ್ನು ಸಾಧಿಸಿ ಸರ್ಕಾರಿ ಹೆಣ್ಣು ಮಕ್ಕಳ ಶಾಲೆಯ ಸ್ಥಳೀಯ ಬಾಲಕಿಯರಿಗಾಗಿ ಉಚಿತ ಯೋಗವನ್ನು ಹಮ್ಮಿಕೊಂಡಿದ್ದು ಸಂತಸವಾಗಿದೆ. ಅವರ ಸೇವೆ ಹೀಗೆಯೇ ಮುಂದುವರೆಯಲಿ. ಯೋಗ ಶಿಬಿರವು ಯಶಸ್ವಿಯಾಗಲಿ ಎಂದರು.
ಯೋಗ ಶಿಕ್ಷಕ ರಾಘವೇಂದ್ರ ನೀಲಣ್ಣವರ ಮಾತನಾಡಿ ಯೋಗದಲ್ಲಿ ಅಗಾಧವಾದಂಥ ಜ್ಞಾನ ಅಡಗಿದೆ. ಆಯುರ್ವೇದ, ಸಂಗೀತ, ನೃತ್ಯದ ಜೊತೆಗೆ ನರಮಾನವ ಮಹಾದೇವನಾಗುವ ಮಾರ್ಗವನ್ನು ಹೊಂದಿದೆ ಎಂದರು.
ಅಧ್ಯಕ್ಷತೆ ವಹಿಸಿದ್ದ ಮುಖ್ಯ ಶಿಕ್ಷಕಿ ಶ್ರೀಮತಿ ಎಸ್. ಎಲ್. ಕಠಾರೆ ಮಾತನಾಡಿದರು.
ಎಲ್ಪಿಎಸ್ ಪರಮಾನಂದನಗರ ಶಾಲೆಯ ಮುಖ್ಯಶಿಕ್ಷಕ ಆರ್. ಎಮ್. ಪಾಟೀಲ, ಮಾಳಿಂಗರಾಯ ತೋಟದ ಮುಖ್ಯಶಿಕ್ಷಕ ಎಚ್. ಜಿ. ಮಲಾವಡಿ, ಸಹ ಶಿಕ್ಷಕಿಂ–ಯರಾದ ಶ್ರೀಮತಿ ಎಸ್. ಪಿ. ಜೋಶಿ, ಶ್ರೀಮತಿ ಎಸ್. ಎಚ್. ಮಾದರ, ಶ್ರೀಮತಿ ಆರ್. ಡಿ. ಬಂಡಿ, ಶ್ರೀಮತಿ ಎಚ್. ಬಿ. ಜಮಾದಾರ, ಕುಮಾರಿ ರೂಪಾ ದಂಡಿನ ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

# ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ವಕೀಲರ ಸಂಘದಿಂದ ಮನವಿ ಸಲ್ಲಿಕೆ

**ಬಾದಾಮಿ :** ವಿವಿದ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ತಾಲೂಕಾ ವಕೀಲರ ಸಂಘದ ವತಿಯಿಂದ ಅಧ್ಯಕ್ಷ ಪ್ರಕಾಶ ಕಲಾಲ ನೇತೃತ್ವದಲ್ಲಿ ಶುಕ್ರವಾರ ತಹಶೀಲದಾರ ಮಧುರಾಜ್ ಇವರ ಮೂಲಕ ಸಿಎಂ ಸಿದ್ದರಾಮಯ್ಯನವ–ರಿಗೆ ಮನವಿ ಸಲ್ಲಿಸಲಾಯಿತು. ಅಖಿಲ ಭಾರತ ವಕೀಲರ ಒಕ್ಕೂಟ ಕರ್ನಾಟಕ ರಾಜ್ಯ ಸಮಿತಿಯ ನೇತೃತ್ವದಲ್ಲಿ ಪೊಲೀಸರ ಏಕಪಕ್ಷೀಯ ವರ್ತನೆಗಳಿಂದ ವಕೀಲರ ರಕ್ಷಣೆಗೆ ನೀಡಬೇಕು. ವಕೀಲರ ಸಂರಕ್ಷಣೆ ಕಾಯ್ದೆ–2024ಕ್ಕೆ ಸೂಕ್ತ ತಿದ್ದುಪಡಿ ಮಾಡಬೇಕು. ಸರ್ವೋಚ್ಚ ನ್ಯಾಯಲಯ ಮತ್ತು ಉಚ್ಚನ್ಯಾಯಾಲಯದ ಮಾರ್ಗಸೂಚಿಗಳನ್ನು ಪಾಲಿಸಬೇಕು. ಅಖಂಡ ಅಖಿಲ ಭಾರತ ಬಾರ್ ಪರೀಕ್ಷೆ ರದ್ದುಪಡಿಸಬೇಕು. ಕಿರಿಯ ವಕೀಲ–ರಿಗೆ ಎರಡು ವರ್ಷಗಳ ಕಾಲ ಮಾಸಿಕ ರೂ.10 ಸಾವಿರ ಸಹಾಯಧನ ನೀಡಬೇಕು. ರಾಜ್ಯದ ಎಲ್ಲಾ ತಾಲೂಕಾ ವಕೀಲರ ಸಂಘಗಳಿಗೆ ತಲಾ ರೂ.5 ಲಕ್ಷ ಹಾಗೂ ಜಿಲ್ಹಾ ವಕೀಲರ ಸಂಘಕ್ಕೆ ರೂ.10 ಲಕ್ಷ ಅನುದಾನ ಮಂಜೂರಿ ಮಾಡಬೇಕು. ರಾಜ್ಯ ಸರಕಾರ ವಕೀಲರು ವೈದ್ಯಕೀಯ ಹಾಗೂ ಜೀವವಿಮೆ ಸೌಲಭ್ಯ ಒದಗಿಸಬೇಕು. ಜಿಲ್ಲಾ ನ್ಯಾಯಾಲಯದಲ್ಲಿ ವಕೀಲರ ಅಕಾಡಮಿ ಸ್ಥಾಪಿಸಬೇಕು. ರಾಜ್ಯದಲ್ಲಿ ಹೆಚ್ಚುವರಿ ನ್ಯಾಯಾಲಯ ಸ್ಥಾಪಿಸಬೇಕು. ಈಗಿರುವ ನ್ಯಾಯಾಲಯಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಎಲ್ಲಾ ನ್ಯಾಯಾಲಯದಲ್ಲಿ ವಕೀಲರ ಚೇಂಬರ್ ಸ್ಥಾಪನೆ ಮಾಡಬೇಕು. ವಕೀಲರಿಗೆ ಟೋಲ್ ಶುಲ್ಕ ವಿನಾಯ್ತಿ ನೀಡಬೇಕು. ಜಿಲ್ಲೆಗೆ ಒಂದರಂತೆ ಕಾನೂನು ಕಾಲೇಜು ಸ್ಥಾಪನೆ ಮಾಡಬೇಕು. ರಾಜ್ಯ ವಕೀಲರ ಪರಿಷತ್ ಕಚೇರಿಯನ್ನು ವಿಭಾಗೀಯ ಮಟ್ಟದಲ್ಲಿ ಸ್ಥಾಪಿಸಬೇಕು. ವಕೀಲರ ಸಂಘದ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ33 ರಷ್ಟು ಮೀಸಲಾತಿ, ಎಸ್.ಸಿ, ಎಸ್.ಟಿ, ಒಬಿಸಿ ಅಲ್ಪಸಂಖ್ಯಾತ ಅನುದಾರ ಮೀಸಲಾತಿ ಕಲ್ಪಿಸಬೇಕು ಸೇರಿದಂತೆ ವಿವಿದ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯಾದ್ಯಂತ ವಕೀಲರ ಸಹಿ ಸಂಗ್ರಹಣೆ ಬೆಂಬಲಿಸಿ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ವಕೀಲರ ಸಂಘದ ಉಪಾಧ್ಯಕ್ಷ ವಿ.ಎಸ್.ಹೊಳಿ, ಕಾರ್ಯದರ್ಶಿ ಯೋಗೇಶ ತೊಗರಿ, ವಕೀಲರಾದ ಜಿ.ಆರ್.ಹೊಸಮನಿ, ಎಸ್.ಬಿ.ಕುಂಬಾರ, ಎನ್.ಪಿ.ವಡ್ಡರ, ವೀರಯ್ಯ ಮಣ್ಣೂರ, ಪಿ.ಬಿ.ಮಲ್ಲಾಪೂರ ಸೇರಿದಂತೆ ಇತರರು ಹಾಜರಿದ್ದರು.

# ಹೊನವಾಡದಲ್ಲಿ ಜ್ಞಾನವಿಕಾಸ ಹೊಸ ಕೇಂದ್ರದ ಉದ್ಘಾಟನೆ

**ವಿಜಯಪುರ :** ಮಹಿಳೆಯರು ಕುಟುಂಬದ ನಿರ್ವಹಣೆಯಲ್ಲಿ ವಹಿಸಬೇಕಾದ ಜಾಣ್ಮೆಯೆಂದರೆ, ಹಣಕಾಸು ವ್ಯವಹಾರ, ಮಕ್ಕಳ ಶಿಕ್ಷಣ, ವೈಯಕ್ತಿಕ ಶುಚಿತ್ವ ಹಾಗು ಪರಿಸರ ಕಾಳಜಿ ಸೇರಿದಂತೆ ಸೂಕ್ತ ಮಾಹಿತಿ ಒದಗಿಸುವಲ್ಲಿ ಜ್ಞಾನವಿಕಾಸ ಕಾರ್ಯಕ್ರಮ ಸಹಕಾರಿಯಾಗಿದೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಿಜಯಪುರ 2 ತಾಲ್ಲೂಕಿನ ಹೊನವಾಡ ವಲಯದ ಮೇಲ್ವಿಚಾರಕರಾದ ಕಿಶೋರ ತೋರಸ್ಕರ ಅವರು ಹೇಳಿದರು.
ತಿಕೋಟಾ ತಾಲ್ಲೂಕಿನ ಹೊನವಾಡ ಕಾರ್ಯಕ್ಷೇತ್ರದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ 2 ತಾಲ್ಲೂಕಿನ ವತಿಯಿಂದ ಅಂಬಾ ಭವಾನಿ ಹೆಸರಿನ ಹೊಸ ಜ್ಞಾನವಿಕಾಸ ಕೇಂದ್ರವನ್ನು ಉದ್ಘಾಟಿಸಿ ಅವರು ಮಾತನಾಡಿದರು.
ಜ್ಞಾನ ವಿಕಾಸ ಸಮನ್ವಯಾಧಿಕಾರಿ ನಿವೇದಿತಾ ಹಿರೆನವರ ಅವರು ಮಾತನಾಡಿ, ಜ್ಞಾನವಿಕಾಸ ಕಾರ್ಯಕ್ರಮ ಮಾತೃಶ್ರೀ ಡಾ. ಹೇಮಾವತಿ ವೀರೇಂದ್ರ ಹೆಗ್ಗಡೆ ಅಮ್ಮನವರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಕಾರ್ಯಕ್ರಮವಾಗಿದ್ದು, ಮಹಿಳೆಯರಿಗಾಗಿಯೇ ಇದನ್ನು ಜಾರಿಗೆ ತರಲಾಗಿದೆ. ಮಹಿಳೆಯರು ಸ್ವಾವಲಂಬಿ ಜೀವನ ನಡೆಸಲು ಹಾಗೂ ಅವರ ಸರ್ವತೋಮುಖ ಅಭಿವೃದ್ಧಿಗೆ ಅನುಕೂಲವಾಗುವಂತಹ ಅನೇಕ ವಿಷಯಗಳ ಕುರಿತು ಜ್ಞಾನವಿಕಾಸ ಕೇಂದ್ರದಲ್ಲಿ ಮಾಹಿತಿ ನೀಡಲಾಗುವುದು ಎಂದರು.
ಅಖಿಲ ಕರ್ನಾಟಕ ರೈತ ಸಂಘದ ಜಿಲ್ಲಾಧ್ಯಕ್ಷರಾದ ಧರೆಪ್ಪ ಅವರು ಮಾತನಾಡಿ
ಪೂಜ್ಯ ಡಾ. ವೀರೇಂದ್ರ ಹೆಗ್ಗಡೆಯವರ ಆಶಯದಂತೆ ಆರೋಗ್ಯಕರ ಸಮಾಜದ ನಿರ್ಮಾಣ, ದುರ್ಬಲ ವರ್ಗದವರ ಆರ್ಥಿಕ ಸಬಲತೆ,
ಸರ್ವರಿಗೂ ಆರೋಗ್ಯ ಭಾಗ್ಯದಂತಹ ವಿವಿಧ ಕಾರ್ಯಕ್ರಮಗಳನ್ನು ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಪ್ರತಿಯೊಬ್ಬರಿಗೂ ತಲುಪಿಸುವ ಕೆಲಸವನ್ನು ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಮಾಡಲಾಗುತ್ತಿದೆ. ಮಹಿಳೆಯರು ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ, ಆರೋಗ್ಯ ಸೇವೆಗೆ ಒತ್ತು ನೀಡಿ ಎಂದರು.
ಈ ಕಾರ್ಯಕ್ರಮದಲ್ಲಿ ಕೇಂದ್ರದ ಅಧ್ಯಕ್ಷರಾದ ಸುಜಾತಾ ತಿವಾರಿ, ಸಮಾಜ ಸೇವಕರಾದ ಮುನೇಶ, ಪ್ರಗತಿಪರ ರೈತರಾದ ಗೋವಿಂದ, ಮನಿಕ್ ಸಿಂಧಿ, ಚಂದ್ರಸಿಂಗ್, ಸಿಎಸ್ಸಿ ಸೇವಾದಾರರು, ಒಕ್ಕೂಟದ ಅಧ್ಯಕ್ಷರು, ಸೇವಾ ಪ್ರತಿನಿಧಿಗಳು, ಜ್ಞಾನ ವಿಕಾಸ ಕೇಂದ್ರದ ಸದಸ್ಯರು ಹಾಜರಿದ್ದರು.

# ಸಮಸ್ಯೆಗಳಿಗೆ ತಕ್ಷಣವೇ ಸ್ಪಂದಿಸಿ ಜನರಿಗೆ ಅನುಕೂಲ ಮಾಡಿಕೊಡಬೇಕು: ರೆಡ್ಡಿ ಶ್ರೀನಿವಾಸ



**ಕೊಪ್ಪಳ** : ಗ್ಯಾರಂಟಿ ಯೋಜನೆಗಳಿಗೆ ಸಂಬಂಧಿಸಿದ ಯಾವುದೇ ದೂರು, ಸಮಸ್ಯೆಗಳಿಗೆ ಅಧಿಕಾರಿಗಳು ತಕ್ಷಣವೇ ಸ್ಪಂದಿಸಿ ಜನರಿಗೆ ಅನುಕೂಲ ಮಾಡಿಕೊಡಬೇಕು ಎಂದು ಕೊಪ್ಪಳ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ ಹೇಳಿದರು.

ಅವರು ಮಂಗಳವಾರ ಕೊಪ್ಪಳ ಜಿಲ್ಲಾ ಪಂಚಾಯತ್‌ನ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಂಬಂಧ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗ್ಯಾರಂಟಿ ಯೋಜನೆಗಳು ರಾಜ್ಯ ಸರ್ಕಾರದ ಮಹತ್ವಕಾಂಕ್ಷೆಯ ಸಾಮಾಜಿಕ ಕಾರ್ಯಕ್ರಮವಾಗಿದೆ. ಸಮಾಜದ ಕಟ್ಟಕಡೆ ವ್ಯಕ್ತಿಗೂ ಆರ್ಥಿಕ ಸಬಲೀಕರಣಕ್ಕೆ ತುಂಬಾ ಸಹಕಾರಿಯಾಗಿರುವ ಪಂಚ ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಸಂಬಂಧಿಸಿದ ಅನುಷ್ಠಾನ ಇಲಾಖೆಗಳ ಅಧಿಕಾರಿಗಳು ಹೆಚ್ಚಿನ ಮುತುವರ್ಜಿ ವಹಿಸಬೇಕು. ಅರ್ಹರೆಲ್ಲರೂ ಗ್ಯಾರಂಟಿ ಯೋಜನೆಗಳ ವ್ಯಾಪ್ತಿಗೆ ಒಳಪಡಬೇಕು ಎಂಬುದು ಸರ್ಕಾರದ ಉದ್ದೇಶವಾಗಿದ್ದು, ಯಾವುದೇ ಅರ್ಹ ಫಲಾನುಭವಿಗಳು ಈ ಯೋಜನೆಯಿಂದ ಹೊರಗುಳಿಯಬಾರದು. ಶಕ್ತಿ, ಗೃಹಲಕ್ಷ್ಮಿ, ಅನ್ನಭಾಗ್ಯ, ಗೃಹಜ್ಯೋತಿ ಹಾಗೂ ಯುವನಿಧಿ ಸೇರಿ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಉಂಟಾಗುತ್ತಿರುವ ಸಣ್ಣ–ಪುಟ್ಟ ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ, ಅರ್ಹ ಫಲಾನುಭವಿಗಳಿಗೆ ಯೋಜನೆಯ ಲಾಭ ದೊರಕಿಸಿ, ಶೇ.100 ರಷ್ಟು ಪ್ರಗತಿ ಸಾಧಿಸಬೇಕು ಎಂದರು.

ಅನ್ನಭಾಗ್ಯ ಯೋಜನೆಯಡಿ ಅರ್ಹ ಪಡಿತರ ಚೀಟಿದಾರರಿಗೆ ಪ್ರತಿ ಸದಸ್ಯರಿಗೆ ಹೆಚ್ಚುವರಿ ಐದು ಕೆ.ಜಿ ಒಳಗೊಂಡಂತೆ ಒಟ್ಟು ಹತ್ತು ಕೆ.ಜಿ ಅಕ್ಕಿಯನ್ನು ವಿತರಣೆ ಮಾಡಲಾಗುತ್ತಿದೆ. ಜನರು ಈ ಅಕ್ಕಿಯನ್ನು ಮಾರಾಟ ಮಾಡಿಕೊಳ್ಳುತ್ತಿರುವ ಬಗ್ಗೆ ಹಲವಾರು ಪ್ರಕರಣಗಳು ಕಂಡು ಬರುತ್ತಿದ್ದು, ಇದಕ್ಕಾಗಿ ಹೆಚ್ಚುವರಿ ಐದು ಕೆ.ಜಿ ಅಕ್ಕಿ ಬದಲಿಗೆ ತೊಗ–ರಿಬೇಳೆ, ಅಡುಗೆ ಎಣ್ಣೆ, ಸಕ್ಕರೆ ಅಥವಾ ಇತರೆ ಆಹಾರಸಾಮಗ್ರಿಗಳನ್ನುವಿತರಣೆಮಾಡಿದರೆ ಜನರಿಗೆ ತುಂಬಾ ಅನುಕೂಲವಾಗಲಿದೆ. ಇದರ ಜೊತೆಗೆ ಅನ್ನಭಾಗ್ಯ ಯೋಜನೆಯ ಅಕ್ಕಿಯ ಅನಧಿಕೃತ ಮಾರಾಟವನ್ನು ಸಹ ತಡೆಯಬಹುದು. ಈ ಕುರಿತು ಅನ್ನಭಾಗ್ಯ ಯೋಜನೆಯಡಿ ಐದು ಕೆ.ಜಿ ಅಕ್ಕಿ ಜೊತೆಗೆ ಇತರೆ ಆಹಾರ ಸಾಮಗ್ರಿ ವಿತರಣೆ ಮಾಡಲು ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಹೇಳಿದರು.

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೆಯ ಅವರು ಮಾತನಾಡಿ, ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿ ಐದು ಕೆ.ಜಿ ಅಕ್ಕಿಯ ಬದಲಿಗೆ ಇತರೆ ಆಹಾರ ಸಾಮಗ್ರಿಗಳನ್ನು ವಿತರಣೆ ಮಾಡಲು ಜಿಲ್ಲೆಯ ಎಲ್ಲಾ ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯಲ್ಲಿಯೂ ಈ ವಿಷಯ ಪ್ರಸ್ತಾಪಿಸಿ, ಸಾರ್ವಜನಿಕರಿಂದ ಅನಿಸಿಕೆ ಪಡೆದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕ್ರಮ ಕೈಗೊಳ್ಳಬೇಕು ಎಂದರು.

ದು ಗ್ಯಾರಂಟಿ ಯೋಜನೆಗಳ ಪ್ರಗತಿ: ಗೃಹಲಕ್ಷ್ಮೀ ಯೋಜನೆಯಡಿ ಕೊಪ್ಪಳ ಜಿಲ್ಲೆಯ 3,26,014 ಫಲಾನುಭವಿಗಳಿಗೆ ಏಪ್ರಿಲ್–2025ರ ಅಂತ್ಯದವರೆಗೆ ಡಿಬಿಟಿ ಮೂಲಕ 1098,44,56,600/– ರೂ. ಗಳನ್ನು ಪಾವತಿಸಲಾಗಿದೆ.

ಗೃಹಜ್ಯೋತಿ ಯೋಜನೆಯಡಿ ಏಪ್ರಿಲ್–2025ರಅಂತ್ಯದವರೆಗೆ2,75,936ಗ್ರಾಹಕ–ರಿಗೆ ಉಚಿತ ವಿದ್ಯುತ್ ಸೌಲಭ್ಯ ದೊರೆತಿದ್ದು, ಇದಕ್ಕಾಗಿ 243.37 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ.

ಅನ್ನಭಾಗ್ಯ ಯೋಜನೆಯಡಿ ಹಣದ ಬದಲಾಗಿ 2,99,213 ಕಾರ್ಡುದಾರ–ರಿಗೆ. 2025ರ ಫೆಬ್ರವರಿ ಮಾಹೆಯಿಂದ ಇಲ್ಲಿಯವರೆಗೂಹೆಚ್ಚುವರಿ5ಕೆ.ಜಿಅಕ್ಕಿಯನ್ನು ವಿತರಿಸಲಾಗುತ್ತಿದೆ. ಶಕ್ತಿ ಯೋಜನೆಯಡಿ 2025ರ ಮೇ ಮಾಹೆಯಲ್ಲಿ 34,77,996 ಮಹಿಳೆಯರು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಿದ್ದು, ಇದಕ್ಕಾಗಿ 15,04,44,105 ರೂ.ಗಳ ಖರ್ಚಾಗಿದೆ.

ಯುವನಿಧಿ ಯೋಜನೆಯಡಿ ಇಲ್ಲಿಯವರೆಗೆ (ಮೇ–2025) 8,881 ಫಲಾನುಭವಿಗಳು ನೋಂದಣಿಯಾಗಿದ್ದು, ಒಟ್ಟು ಮೊತ್ತ ರೂ. 11.58 ಕೋಟಿಗಳನ್ನು ಪಾವತಿಸಲಾಗಿರುತ್ತದೆ ಎಂದು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಎಸ್.ಬಿ.ಖಾದ್ರಿ, ಮಂಜುನಾಥ ಗೊಂಡಬಾಳ, ಅಮರೇಶಪ್ಪ ಎಸ್.ಜಿ. ಮತ್ತು ಖಾಸಿಂಸಾಬ ಮರ್ದಾನಸಾಬ, ಗ್ಯಾರಂಟಿ ಯೋಜನೆಗಳ ನೋಡಲ್ ಅಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ ಸೇರಿದಂತೆ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸದಸ್ಯರು, ಜಿಲ್ಲೆಯ ವಿವಿಧ ತಾಲ್ಲೂಕುಗಳ ಅಧ್ಯಕ್ಷರು ಹಾಗೂ ಗ್ಯಾರಂಟಿ ಯೋಜನೆ ಅನುಷ್ಠಾನ ಇಲಾಖೆಗಳ ಅಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಡಿ ಅರ್ಜಿ ಆಹ್ವಾನ

**ಕೊಪ್ಪಳ**:ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2025–26ನೇ ಸಾಲಿನ ವಿವಿಧ ಯೋಜನೆಗಳಡಿ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ನಿಗಮದ ಡಿ.ದೇವರಾಜ ಅರಸು ಸ್ವಯಂ ಉದ್ಯೋಗ ವೈಯಕ್ತಿಕಸಾಲಯೋಜನೆ,ಗಂಗಾಕಲ್ಯಾಣನೀರಾವರಿ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ, ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಸ್ವಯಂ ಉದ್ಯೋಗ ಸಾಲ ಯೋಜನೆ(ವಾಣಿಜ್ಯ ಬ್ಯಾಂಕುಗಳ ಸಹಯೋಗದೊಂದಿಗೆ), ಹಾಗೂ ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ (https://www.kaushalkar.com/), ಹೊಲಿಗೆ ಯಂತ್ರ ವಿತರಣೆ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಮೇಲ್ಕಂಡ ಯೋಜನೆಗಳು ವಿಶ್ವಕರ್ಮ, ಉಪ್ಪಾರ, ಅಂಬಿಗ, ಸವಿತಾ, ಮಡಿವಾಳ, ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯ, ಒಕ್ಕಲಿಗ, ಲಿಂಗಾಯತ, ಕಾಡುಗೊಲ್ಲ, ಮರಾಠ ಮತ್ತು ಇದರ ಉಪ ಸಮುದಾಯಗಳನ್ನು ಹೊರತುಪಡಿಸಿ ಹಿಂದುಳಿದ ವರ್ಗಗಳಪ್ರವರ್ಗ–1,2ಎ,3ಎಮತ್ತು3ಬಿನಲ್ಲಿಉಳಿದ ಸಮುದಾಯಗಳಿಗೆ ಅನ್ವಯವಾಗುತ್ತವೆ. ಒಂದು ಬಾರಿ ನಿಗಮಗದ ಯಾವುದಾದರೂ ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. 2023–24 ಮತ್ತು 2024–25ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿ ಸೌಲಭ್ಯ ಪಡೆಯದೇ ಇರುವ ಫಲಾಪೇಕ್ಷಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ.

ಅರ್ಜಿದಾರರು ಆಧಾರ್ ಜೋಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರಬೇಕು. ಆಧಾರ್ ಕಾರ್ಡಿನಲ್ಲಿರುವಂತೆ ಹೆಸರು(ಶ್ರೀ/ಶ್ರೀಮತಿ/ಕುಮಾರಿ ಮುಂತಾದ ಮಾಹಿತಿಯನ್ನು ಒಳಗೊಂಡಂತೆ) ಇತರೆ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಬ್ಯಾಂಕ್ ಪಾಸ್‌ಪುಸ್ತಕದಲ್ಲಿ ಹೊಂದಾಣಿಕೆಯಾಗಬೇಕು. ಗ್ರಾಮಒನ್, ಬೆಂಗಳೂರು ಒನ್, ಕರ್ನಾಟಕ ಒನ್, ನಾಗರಿಕ ಸೇವಾ ಕೇಂದ್ರಗಳ ಮೂಲಕ ಸೇವಾಸಿಂಧು ಪೋರ್ಟಲ್ www.sevasindhu.karnataka.gov.in ನಲ್ಲಿ ಆನ್‌ಲೈನ್‌ನಲ್ಲಿ ಜೂನ್ 30 ರೊಳಗೆ ಅರ್ಜಿ ಸಲ್ಲಿಸಬೇಕು. ಸೌಲಭ್ಯಗಳ ವಿವರ, ಅರ್ಹತೆ, ಮಾನದಂಡ ಮತ್ತು ದಾಖಲಾತಿಗಳ ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್ www.dbcdc.karnataka.gov.in ಗೆ ಭೇಟಿ ನೀಡಬಹುದು ಅಥವಾ ನಿಗಮದ ದೂರವಾಣಿ ಸಂಖ್ಯೆ 080–22374832 ಮತ್ತು ಮೊಬೈಲ್ ಸಂಖ್ಯೆ: 8050770004, 8050770005 ಗೆ ಅಥ–ವಾ ಕೊಪ್ಪಳ ಕಚೇರಿ ದೂ.ಸಂ: 08539–221847 ಗೆ ಸಂಪರ್ಕಿಸಬಹುದು ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಡಿ ಅರ್ಜಿ ಆಹ್ವಾನ

**ಕೊಪ್ಪಳ** : ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದಿಂದ 2025–26ನೇ ಸಾಲಿನ ವಿವಿಧ ಯೋಜನೆಗಳಡಿ ಪ್ರವರ್ಗ–3ಬಿ ಅಡಿಯಲ್ಲಿ 2(ಎ) ಯಿಂದ 2(ಎಫ್) ವರೆಗೆ ಬರುವ ಸಮುದಾಯದ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ನಿಗಮದ ಶ್ರೀ ಶಹಜೀರಾಜೇ(ಸ್ವಯಂ ಉದ್ಯೋಗ ಸಾಲ ಮತ್ತು ಸಹಾಯಧನ) ಯೋಜನೆ, ಜೀಜಾವು ಜಲಭಾಗ್ಯ ಯೋಜನೆ(ಗಂಗಾ ಕಲ್ಯಾಣ ನೀರಾವರಿ ಯೋಜನೆ), ಅರಿವು ಶೈಕ್ಷಣಿಕ ಸಾಲ ಯೋಜನೆ(ಹೊಸ ವಿದ್ಯಾರ್ಥಿಗಳು ಮತ್ತು ನವೀಕರಣ, ಕೊನೆಯ ದಿನಾಂಕವಿರುವುದಿಲ್ಲ.), ರಾಜಶ್ರೀ ಶಾಹುಮಹಾರಾಜ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಸಾಲ ಯೋಜನೆ, ಮರಾಠ ಮಿಲ್ಟ್ರಿ ಹೋಟೆಲ್, ಸ್ವಯಂ ಉದ್ಯೋಗ ಸಾಲ ಯೋಜನೆ(ವಾಣಿಜ್ಯ ಬ್ಯಾಂಕುಗಳ ಸಹಯೋಗದೊಂದಿಗೆ), ಸ್ವಾವಲಂಬಿ ಸಾರಥಿ ಯೋಜನೆ ಹಾಗೂ ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ (https://www.kaushalkar.com/) ಅಡಿ ಸೌಲಭ್ಯ ಪಡೆಯಲು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಒಂದು ಬಾರಿ ನಿಗಮಗದ ಯಾವುದಾದರೂ ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹ–ರಿರುವುದಿಲ್ಲ. ಕುಟುಂಬದ ಒಬ್ಬರಿಗೆ ಮಾತ್ರ ಸೌಲಭ್ಯ ಪಡೆಯಲು ಅವಕಾಶವಿದೆ. 2023–24 ಮತ್ತು 2024–25ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿ ಸೌಲಭ್ಯ ಪಡೆಯದೇ ಇರುವ ಫಲಾಪೇಕ್ಷಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ.

ಅರ್ಜಿದಾರರು ಆಧಾರ್ ಹಾಗೂ ಮೊಬೈಲ್ ಸಂಖ್ಯೆ ಜೋಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರಬೇಕು. ಆಧಾರ್ ಕಾರ್ಡಿನಲ್ಲಿರುವಂತೆ ಹೆಸರು(ಶ್ರೀ/ಶ್ರೀಮತಿ/ಕುಮಾರಿ ಮುಂತಾದ ಮಾಹಿತಿಯನ್ನು ಒಳಗೊಂಡಂತೆ) ಇತರೆ ದಾಖಲಾತಿಗಳಾದ ಜಾತಿ ಮತ್ತು ಆದ–ಾಯ ಪ್ರಮಾಣ ಪತ್ರ, ಬ್ಯಾಂಕ್ ಪಾಸ್‌ಪುಸ್ತಕದಲ್ಲಿ ಹೊಂದಾಣಿಕೆಯಾಗಬೇಕು. ಗ್ರಾಮಒನ್, ಬೆಂಗಳೂರು ಒನ್, ಕರ್ನಾಟಕ ಒನ್, ನಾಗರಿಕ ಸೇವಾ ಕೇಂದ್ರಗಳ ಮೂಲಕ ಸೇವಾಸಿಂಧು ಪೋರ್ಟಲ್ www.sevasindhu.karnataka.gov.in ನಲ್ಲಿ ಆನ್‌ಲೈನ್‌ನಲ್ಲಿ ಜುಲೈ 04 ರೊಳಗೆ ಅರ್ಜಿ ಸಲ್ಲಿಸಬೇಕು.

# ಗಂಗಾವತಿ ನ್ಯಾಯಾಲಯದಿಂದ ಆರೋಪಿಗೆ ಶಿಕ್ಷೆ ಪ್ರಕಟ

**ಕೊಪ್ಪಳ** : ವ್ಯಕ್ತಿಯೊಬ್ಬರ ಕೊಲೆಗೆ ಯತ್ನಿಸಿದ ಆರೋಪಿಯ ಮೇಲಿನ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಗಂಗಾವತಿಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಗೌರಾವಾನ್ವಿತ ನ್ಯಾಯಾಧೀಶರಾದ ಸದಾನಂದ ನಾಗಪ್ಪ ನಾಯಕ ಅವರು ಅಪರಾಧಿಗೆ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ.

ಪ್ರಕರಣದ ಫಿರ್ಯಾದುದಾರರು ಹಾಗೂ ಆರೋಪಿಯು ಸ್ನೇಹಿತಾರಾಗಿದ್ದು, ಕಳೆದ ಮೊಹರಂ ಹಬ್ಬದ ಸಂದರ್ಭದಲ್ಲಿ ಇಬ್ಬರ ನಡುವೆ ಮಾತಿನ ಚಕಮಕಿ ನಡೆದು ಫಿರ್ಯಾದುದಾರರು ಆರೋಪಿಗೆ ಉಳಿದ ಸ್ನೇಹಿತರ ಮುಂದೆ ಅವಮಾನ ಮಾಡಿದರು ಎಂಬ ದ್ವೇಷದಿಂದ ದಿನಾಂಕ: 27–10–2022 ರಂದು ಮಧ್ಯಾಹ್ನ 1 ಗಂಟೆಯ ಸುಮಾರಿಗೆ ಚಿಕ್ಕಜಂತಕಲ್ ಗ್ರಾಮದ ಶಾದಿ ಮಹಲ್ ಹತ್ತಿರ ಫಿರ್ಯಾದುದಾರರು ಸ್ನೇಹಿತರೊಂದಿಗೆಮಾತನಾಡುತ್ತಾಕುಳಿತಾಗ ಆರೋಪಿಯುಫಿರ್ಯಾದುದಾರರಕುತ್ತಿಗೆಗೆ ಚಾಕುವಿನಿಂದ ಇರಿದು ಮಾರಣಾಂತಿಕ ಹಲ್ಲೆ ನಡೆಸಿರುತ್ತಾನೆ.

ಈ ಸಂಬಂಧ ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ತನಿಖಾಧಿಕಾ–ರಿಗಳಾದ ಮಂಜುನಾಥ ಅವರು ತನಿಖೆಯಲ್ಲಿ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ 307, 504, 506 ಪ್ರಕಾರ ಅಪರಾಧವೆಸಗಿದ್ದು ತನಿಖೆಯಿಂದ ಮತ್ತು ಸಾಕ್ಷ್ಯಾಧಾರಗಳಿಂದ ದೃಢಪಟ್ಟಿದ್ದ–ರಿಂದ ಆರೋಪಿ ಓಂ ಪ್ರಕಾಶ ತಂದೆ ಹೆಚ್. ಈರಣ್ಣ, ಸಾ॥ ಜಂತಕಲ್ ಈತನ ಮೇಲೆ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಗಂಗಾವತಿಯ 1ನೇ ಹೆಚ್ಚವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆದಿದ್ದು, ಸಾಕ್ಷಿದಾರರು ಹಾಗೂ ದಾಖಲೆಗಳನ್ನು ಪರಿಶೀಲಿಸಿದ ಗೌರವಾನ್ವಿತ ನ್ಯಾಯಾಧೀಶರು, ಆರೋಪಿತನು ತಪ್ಪಿತಸ್ಥನೆಂದು ತೀರ್ಪು ನೀಡಿ, ಆರೋಪಿತನಿಗೆ ಭಾರತೀಯ ದಂಡ ಸಂಹಿತೆ ಕಲಂ 307 ಅಪರಾಧಕ್ಕೆ 7 ವರ್ಷ ಕಾರಾಗೃಹ ವಾಸದ ಶಿಕ್ಷೆ, ಹಾಗೂ ರೂ.5000 ಗಳ ದಂಡ, 3 ತಿಂಗಳೊಳಗೆ ದಂಡ ಪಾವತಿಸದಿದ್ದಲ್ಲಿ 3 ತಿಂಗಳು ಸಾದಾ ಕಾರಾಗೃಹ ವಾಸದ ಶಿಕ್ಷೆ ಅನುಭವಿಸುವಂತೆ ಹಾಗೂ ಭಾರತೀಯ ದಂಡ ಸಂಹಿತೆ ಕಲಂ 506 ಅಪರಾಧಕ್ಕೆ 2 ವರ್ಷಗಳ ಕಾರಾಗೃಹ ವಾಸದ ಶಿಕ್ಷೆ ಹಾಗೂ ರೂ.2000 ಗಳ ದಂಡ, 2 ತಿಂಗಳೊಳಗೆ ದಂಡ ಪಾವತಿಸದಿದ್ದಲ್ಲಿ 2 ತಿಂಗಳು ಸಾದಾ ಕಾರಾಗೃಹ ವಾಸ ಶಿಕ್ಷೆ ಅನುಭವಿಸುವಂತೆ ದಿನಾಂಕ: 09–06–2025 ರಂದು ತೀರ್ಪು ನೀಡಿದ್ದಾರೆ.

ಪ್ರಕರಣದಲ್ಲಿ ಅಭಿಯೋಜನಾ ಪರವಾಗಿ ಸರ್ಕಾರಿ ಅಭಿಯೋಜಕರಾದ ನಾಗಲಕ್ಷ್ಮೀ ಎಸ್. ಅವರು ವಾದ ಮಂಡಿಸಿರುತ್ತಾರೆ. ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯ ಸಿಬ್ಬಂದಿ ವೆಂಕಟೇಶ ಮತ್ತು ಮಂಜುನಾಥ ರವರು ಪ್ರಕರಣದ ವಿಚಾರಣೆ ಸಮಯದಲ್ಲಿ ಸಾಕ್ಷಿಗಳನ್ನು ಸಮಯಕ್ಕೆ ಸರಿಯಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿ ಸಹಕಾರ ನೀಡಿದ್ದಾರೆ ಎಂದು ಗಂಗಾವತಿಯ ಸರಕಾರಿ ಅಭಿಯೋಜಕರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಕೈಜೋಡಿಸಿ: ಸಂತೋಷ ಬಂಡೆ



**ವಿಜಯಪುರ** : ಬಾಲ ಕಾರ್ಮಿಕ ಪದ್ಧತಿಯು ಸಾಮಾಜಿಕ ಪಿಡುಗಾಗಿದ್ದು, ಮಕ್ಕಳನ್ನು ಬಾಲ ಕಾರ್ಮಿಕರನ್ನಾಗಿ ಮಾಡದೇ ಶಿಕ್ಷಣದ ಮುಖ್ಯ ವಾಹಿನಿಗೆ ಕರೆತಂದು ಈ ಪದ್ಧತಿಯ ನಿರ್ಮೂಲನೆಗೆ ಎಲ್ಲರೂ ಕೈಜೋಡಿಸಬೇಕು ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ಗುರುವಾರದಂದು ತಾಲೂಕಿನ ಹಿರೇರೂಗಿ ಗ್ರಾಮದ ಯುಬಿಎಸ್ ಶಾಲೆಯಲ್ಲಿ ಹಮ್ಮಿಕೊಂಡ ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನವನ್ನು ಉದ್ದೇಶಿಸಿ ಮಾತನಾಡಿದರು.

ಬಾಲ ಕಾರ್ಮಿಕರಾಗಿ ದುಡಿಯುತ್ತಿರುವ ಮಕ್ಕಳು ಈ ಕೆಟ್ಟ ವ್ಯವಸ್ಥೆಯಿಂದ ಹೊರಬಂದು ತಮ್ಮ ಹಕ್ಕುಗಳ ಕುರಿತು ಜಾಗೃತಿ ಹೊಂದಿ ದೇಶದ ಉತ್ತಮ ನಾಗ–ರಿಕರಾಗಬೇಕು ಎಂದು ಹೇಳಿದರು.

ಮುಖ್ಯ ಶಿಕ್ಷಕ ಎಸ್ ಎಸ್ ಅರಬ ಅಧ್ಯಕ್ಷತೆ ವಹಿಸಿ ಮಾತನಾಡಿ, ದೈಹಿಕ ಹಾಗೂ ಮಾನಸಿಕ ಸಾಮಥ–್ರ್ಯಕ್ಕೆ ಕಷ್ಟವಾಗುವಂಥ ಕೆಲಸಗಳನ್ನು ಮಾಡುತ್ತಾ, ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಪೌಷ್ಟಿಕ ಆಹಾರ ಕೊರತೆಯಿಂದಾಗಿ ಅನೇಕ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಕೆಲವೊಮ್ಮ ತಮ್ಮ ಜೀವವನ್ನೆ? ಕಳೆದುಕೊಳ್ಳುತ್ತಿದ್ದಾರೆ. ಹಾಗಾಗಿ ಬಾಲ ಕಾರ್ಮಿಕ ಪದ್ಧತಿಯಿಂದ ಉಂಟಾಗುವ ಪರಿಣಾಮದ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯತೆ ತುಂಬಾ ಇದೆ ಎಂದು ಹೇಳಿದರು.

ಶಿಕ್ಷಕರಾದ ಎನ್ ಬಿ ಚೌಧರಿ, ಎಸ್ ಪಿ ಪೂಜಾರಿ,ಅತಿಥಿ ಶಿಕ್ಷಕಿ ಅಲ್ಫಿಯಾ ಅಂಗಡಿ, ಮಕ್ಕಳು ಭಾಗವಹಿಸಿದ್ದರು.

# ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಮಾಡಬೇಕಿದೆ: ಪ್ರೊ, ಶಾಂತಾದೇವಿ




**ವಿಜಯಪುರ** : ಬಾಲಕಾರ್ಮಿಕ ಪದ್ಧತಿಯು ಅನಿಷ್ಟ ಪದ್ಧತಿಯಾಗಿದ್ದು, ಇದನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಬೇಕು ಎಂದು ಮಹಿಳಾ ವಿವಿಯ ಹಂಗಾಮಿ ಕುಲಪತಿ ಪ್ರೊ.ಶಾಂತಾದೇವಿ ಟಿ ಸಲಹೆ ಮಾಡಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್ ಕೋಶದ ಸ್ನಾತಕ, ಶಿಕ್ಷಣ, ಆ.ಬ. ಮತ್ತು ಮುಕ್ತ ಘಟಕಗಳ ವತಿಯಿಂದ ಗುರುವಾರ ಆಯೋಜಿಸಿದ್ದ 'ವಿಶ್ವ ಬಾಲಾಕಾರ್ಮಿಕ ವಿರೋಧಿ ದಿನಾಚರಣೆಯ' ಅಂಗವಾಗಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಕ್ಕಳು ನಿಯಮಿತವಾಗಿ ಶಾಲೆಗೆ ಹೋಗಿ ಉತ್ತಮ ಶಿಕ್ಷಣ ಪಡೆಯಬೇಕು. ದೇಶದ ಭವಿಷ್ಯ ಇಂದಿನ ಮಕ್ಕಳ ಮೇಲೆ ಅವಲಂಬಿತವಾಗಿದ್ದು, ಅವರು ಶಿಕ್ಷಣದ ಮೂಲಕ ಬೆಳೆಯಬೇಕು. ಪಾಲಕರು ತಮ್ಮ ಮಕ್ಕಳನ್ನು ಯಾವುದೇ ರೀತಿಯ ಕೆಲಸಕ್ಕೆ ತಳ್ಳಬಾರದು. ಹಾಗೆಯೇ ಉದ್ಯೋಗದಾತರು 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಅಪಾಯಕಾರಿ ಅಥ–ವಾ ಶ್ರಮದಾಯಕ ಕೆಲಸಗಳಿಗೆ ನೇಮಿಸಿದರೆ, ಅದು ಅಪರಾಧವಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಮಹಿಳಾ ವಿವಿಯ ಕಲಸಚಿವ ಶಂಕರಗೌಡ ಸೋಮನಾಳ ಮಾತನಾಡಿ, ನಾವು ವಾಸಿಸುವ ಹಾಗೂ ನಮ್ಮ ಸುತ್ತಮುತ್ತಲಿನ, ಹಾಗೆಯೇ ನಾವು ಕೆಲಸ ಮಾಡುವ ಸ್ಥಳಗಳಲ್ಲಿ ಯಾವುದೇ ರೀತಿಯ ಬಾಲಕಾರ್ಮಿಕರು ಕಂಡುಬಂದಲ್ಲಿ, ಅವರಿಗೆ ಕೆಲಸ ನೀಡಿದ ಮಾಲೀಕರಿಗೂ ಪೋಷಕ–ರಿಗೂ ತಿಳುವಳಿಕೆ ನೀಡಿ, ಆ ಮಗುವನ್ನು ಶಾಲೆಗೆ ಸೇರಿಸುವಂತೆ ಪ್ರೇರೇಪಿಸಬೇಕು. ಬಾಲಕಾರ್ಮಿಕರು ಮತ್ತು ಕಿಶೋರ್ ಕಾರ್ಮಿಕರನ್ನು ತೊಡಗಿಸಿಕೊಂಡು ತಯಾರಿಸಲ್ಪಟ್ಟ ಯಾವುದೇ ವಸ್ತುಗಳನ್ನು ನಾವು ಉಪಯೋಗಿಸುವುದಿಲ್ಲ. ಹಾಗೆಯೇ, ಅವರ ಸೇವೆಗಳನ್ನು ಪಡೆದುಕೊಳ್ಳುವುದಿಲ್ಲ ಎಂಬುದನ್ನು ನಾವು ಪ್ರಾಮಾಣಿಕವಾಗಿ ಹಾಗೂ ಆತ್ಮಸಾಕ್ಷಿಯಾಗಿ ಹೇಳುತ್ತಾ, ವಿಶ್ವ ಬಾಲಕಾರ್ಮಿಕ ವಿರೋಧಿ ದಿನದ ಅಂಗವಾಗಿ ಪ್ರಮಾಣ ವಚನ ಸ್ವೀಕ–ರಿಸುತ್ತೇವೆ ಎಂದು ವಿದ್ಯಾರ್ಥಿನಿಯರಿಗೆ ಬೋಧಿಸಿದರು.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾನಿಲಯದ ಸ್ಥಾನಿಕ ಅಭಿಯಂತರ ಮಾರುತಿ ಕದಂ, ಸಮಾಜ ಕಾರ್ಯ ವಿಭಾಗದ ಸಹ–ಪ್ರಾಧ್ಯಾಪಕ ಡಾ. ರಮೇಶ ಎಮ್. ಸೋನಕಾಂಬಳೆ, ವಾಣಿಜ್ಯ ಮತ್ತು ವ್ಯವಹಾರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಚಂದ್ರಶೇಖರ ಮಠಪತಿ, ಎನ್.ಎಸ್.ಎಸ್ ಕೋಶದ ಸಂಯೋಜಕ ಪ್ರೊ. ಅಶೋಕಕುಮಾರ ಸುರಪುರ, ಎನ್.ಎಸ್.ಎಸ್ ಘಟಕಗಳ ಕಾರ್ಯಕ್ರಮಾಧಿಕಾರಿ ಡಾ. ಅಮರನಾಥ ಪ್ರಜಾಪತಿ ಹಾಗೂ ಎಲ್ಲ ಎನ್.ಎಸ್.ಎಸ್ ಘಟಕಗಳ ಸ್ವಯಂ ಸೇವಕಿಂ–ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಪ್ರೊ. ವಿಷ್ಣು ಎಂ ಶಿಂದೆ ಸ್ವಾಗತಿಸಿದರು. ಡಾ. ಕಲಾವತಿ ಎಚ್. ಕಾಂಬಳೆ ನಿರೂಪಿಸಿದರು. ಡಾ. ಗುಲಾಬ ರಾಠೋಡ ವಂದಿಸಿದರು.

# ವಿರಕ್ತಶ್ರೀಗಳ ಪವಾಡ ಲೇಖನಗಳಿಗೆ ಶ್ರೀಮಠದಿಂದ ಆಹ್ವಾನ



**ತಾಳಿಕೋಟೆ**:ಕರ್ನಾಟಕದರಾಜ್ಯದ ಪ್ರತಿಷ್ಠಿತ ಮಠಗಳಲ್ಲಿ ಒಂದಾದ ತಾಳಿಕೋಟೆಯ ಶ್ರೀ ಖಾಸ್ಗತೇಶ್ವರ ಮಠದ ಹಿಂದಿನ ಪೀಠಾಧಿಪತಿ ಲಿಂ.ವಿರಕ್ತ ಮಹಾಸ್ವಾಮಿಗಳವರ ಜೀವನ ಚರಿತ್ರೆ ಪುಸ್ತಕ ಬಿಡುಗಡೆ ಮಾಡಬೇಕೆಂಬ ಸದ್ಭಕ್ತ ಸದ್ದಿಚ್ಚೆಯಂತೆ ಈಗಾಗಲೇ ಶ್ರೀಮಠಕ್ಕೆ ತಿಳಿದಿರುವಂತೆ ವಿರಕ್ತಶ್ರೀಗಳ ಜೀವನ ಚರಿತ್ರೆ ಪುಸ್ತಕ ತಯಾರಿಗೆ ಸಿದ್ದತೆ ಕೈಗೊಳ್ಳಲಾಗಿದೆ ಎಂದು ಶ್ರೀಮಠದ ಉಸ್ತುವಾರಿ ವೇ.ಮುರುಘೇಶ ವಿರಕ್ತಮಠ ಅವರು ತಿಳಿಸಿದ್ದಾರೆ.

ವಿರಕ್ತಶ್ರೀಗಳು ತಮ್ಮ ಹೊರಗಣ್ಣುಗಳಿಲ್ಲದಿದ್ದರೂ ಒಳಗಣ್ಣಿನಿಂದ ಎಲ್ಲವನ್ನು ಬಲ್ಲವರಾಗಿದ್ದರು ಮತ್ತು ಸಾಮಾಜಿಕವಾಗಿ ಹಾಗೂ ಭಕ್ತರಿಗೆ ಶ್ರೀಖಾಸ್ಗತ ಎಂಬ ನಾಮಾಂಕಿತದೊಂದಿಗೆ ಪವಾಡ ಸದೃಶ್ಯದಂತೆ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಡುವಂತಹ ಅನೇಕ ಲೇಖನಗಳು ಶ್ರೀಮಠಕ್ಕೆ ಈಗಾಗಲೇ ಲಭ್ಯವಾಗಿದ್ದು ಅದರಂತೆ ಇನ್ನೂ ಅನೇಕ ಭಕ್ತಾಧಿಗಳಿಗೆ ಶ್ರೀಗಳಿಂದ ತಮಗಾದ ಪವಾಡದ ಅನುಭವದ ಘಟನೆಗಳು ಮತ್ತು ಅನುಕೂಲತೆಗಳ ಬಗ್ಗೆ ತಿಳಿದಿದ್ದರೆ ಮುಕ್ತವಾಗಿ ಶ್ರೀಮಠದಿಂದ ಸಿದ್ದತೆಯಲ್ಲಿರುವ ವಿರಕ್ತಶ್ರೀಗಳ ಜೀವನ ಚರಿತ್ರೆ ಪುಸ್ತಕದಲ್ಲಿ ಬಳೆಸಿಕೊಳ್ಳಬಹುದಾಗಿದ್ದು ಕಾರಣ ಶ್ರೀಮಠದ ಭಕ್ತಾಧಿಗಳು ವಿರಕ್ತಶ್ರೀಗಳಜೀವನಚರಿತ್ರೆಪುಸ್ತಕಕ್ಕೆ ಲೇಖನ ಒದಗಿಸಬೇಕಾದಲ್ಲಿ ಮೋ.9448645706 ಗೆ ಸಂಪರ್ಕಿಸಬೇಕೆಂದು ಶ್ರೀಮಠದ ಉಸ್ತುವಾರಿ ವೇ.ಮುರುಘೇಶ ವಿರಕ್ತಮಠ ಅವರು ತಿಳಿಸಿದ್ದಾರೆ.

# ಪ್ರಧಾನಿ ಮೋದಿ ಸರ್ಕಾರ ಬಂದ ಬಳಿಕ ಭ್ರಷ್ಟಾಚಾರಕ್ಕೆ ಕಡಿವಾಣ: ಸಂಸದ ಕಾರಜೋಳ




**ವಿಜಯಪುರ** : ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಬಂದ ಬಳಿಕ ಬಡವರ ಕುರಿತು ಹೆಚ್ಚಿನ ಗಮನ ಹರಿಸಿದ್ದು, ಸರ್ಕಾರಿ ಕಚೇರಿಗಳಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿದ್ದು, ಒಂದು ರೂಪಾಯಿ ಕೂಡ ನೇರವಾಗಿ ಫಲಾನುಭವಿಗಳ ಅಕೌಂಟಿಗೆ ಯೋಜನೆಯ ಹಣ ಹಾಕಿ, ಭ್ರಷ್ಟಾಚಾರ ರಹಿತ ಆಡಳಿತಕ್ಕೆ ಮುನ್ನುಡಿ ಬರೆಯಲಾಗಿದೆ ಎಂದು ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದು ದಶಕದ ಹಿಂದೆ ದೇಶದಲ್ಲಿ ಕೇವಲ 120 ಸ್ಟಾರ್ಟ್ ಅಪ್‌ಗಳಿದ್ದವು. ಈಗ 1 ಲಕ್ಷಕ್ಕೂ ಅಧಿಕ ಸ್ಟಾರ್ಟ್ ಅಪ್‌ಗಳಿವೆ. ಮೋದಿ ಸರ್ಕಾರ 68 ಲಕ್ಷ ಬೀದಿ ಬದಿ ವ್ಯಾಪಾರಸ್ಥರಿಗೆ ಪಿಎಂ ಸ್ವನಿಧಿ ಯೋಜನೆಯಡಿ ಸಾಲ ಸೌಲಭ್ಯ ಕಲ್ಪಿಸಿದೆ. ಇದರಲ್ಲಿ ಹಿಂದುಳಿದವರಿಗೆ ಶೇ.10ರಷ್ಟು ಮೀಸಲಿಟ್ಟಿದೆ. ಅಲ್ಲದೇ, ಮುದ್ರಾ ಯೋಜನೆಯಲ್ಲಿ ಸಹ ಶೇ.70 ರಷ್ಟು ಜನ ಎಸ್ಸಿ ಎಸ್ಟಿ, ಒಬಿಸಿಯವರಿದ್ದಾರೆ. 4 ವರ್ಷದಲ್ಲಿ 75000 ವೈದ್ಯ ಸೀಟ್ ಹೆಚ್ಚಿಸಿದ್ದೇವೆ. ಇದ–ರಿಂದ ಸಾಮಾನ್ಯರೂ ವೈದ್ಯರಾಗುವ ಕನಸು ಈಡೇರಿಸಿಕೊಳ್ಳುತ್ತಿದ್ದಾರೆ. ಅಲ್ಲದೇ, ಪಿಜಿ ಸೀಟ್ ಅನ್ನು 80000 ಕ್ಕೆ ಹೆಚ್ಚಿಸಿದ್ದೇವೆ ಎಂದರು.

ಇನ್ನು ಪಿಎಂಶ್ರೀ ಯೋಜನೆಯಲ್ಲಿ 16800 ಸರ್ಕಾರಿಶಾಲೆಗಳಅಭಿವೃದ್ಧಿಕೈಗೊಳ್ಳಲಾಗಿದೆ. ಉಡಾನ್ ಯೋಜನೆಯಲ್ಲಿ 1.5 ಕೋಟಿ ಜನ ಲಾಭ ಪಡೆಯುತ್ತಿದ್ದಾರೆ. ಜನರ ವಿಮಾನ ಪ್ರಯಾಣದ ಕನಸು ನನಸಾಗಿದೆ. ವಿಮಾನ ನಿಲ್ದಾಣಗಳ ಸಂಖ್ಯೆ ಈಗ 74 ರಿಂದ 160 ಕ್ಕೆ ಏರಿದೆ. ಆಯುಷ್ಮಾನ್ ಭಾರತ್‌ದಲ್ಲಿ 1.3 ಲಕ್ಷ ಕೋಟಿಉಳಿತಾಯವಾಗಿದೆ.9ಕೋಟಿಜನಕ್ಕೆ ಚಿಕಿತ್ಸೆ ಕೊಟ್ಟಿದ್ದೇವೆ. ದೇಶದಲ್ಲಿ 16000 ಕ್ಕೂ ಹೆಚ್ಚು ಜನೌಷಧಿ ಕೇಂದ್ರಗಳಿದ್ದು, ಇದರಿಂದ 38000 ಕೋಟಿ ಉಳಿತಾಯವಾಗಿದೆ. ಆದ–ರೆ, ಕಾಂಗ್ರೆಸ್ಸಿಗರಿಗೆ ಪ್ರಧಾನಿ ಪದವೇ ಅಲರ್ಜಿ ಇರಬೇಕು. ಹಾಗಾಗಿ ರಾಜ್ಯದಲ್ಲಿ ಪಿಎಂ ಜನೌಷಧಿ ಕೇಂದ್ರ ಬಂದ್ ಮಾಡಿದ್ದಾರೆ. ಆದರೆ, ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸಾಮಾನ್ಯ ಔಷಧಿಗಳೂ ಲಭ್ಯವಾಗುತ್ತಿಲ್ಲ ಎಂದರು.

ಜಮ್ಮು– ಕಾಶ್ಮೀರದಲ್ಲಿ, ಮೋದಿ ಅವರು 10 ಬಾರಿ ಅಧಿಕಾರಕ್ಕೆ ಬಂದರೂ ಆರ್ಟಿಕಲ್ 370 ತೆಗೆಯಲಾಗುವುದಿಲ್ಲ ಎಂದಿದ್ದರು. ಆದರೆ, 2ನೇ ಅವಧಿಯಲ್ಲೇ ಅದನ್ನು ಕಿತ್ತೆಸೆದರು. ಆರ್ಟಿಕಲ್ 370 ತೆಗೆದ ಮೇಲೆ ಅಲ್ಲಿ ಅಭಿವೃದ್ಧಿಯ ಹೊಳೆಯೇ ಹರಿದಿದೆ. ಅಲ್ಲಿನ ನಿವಾಸಿಗಳು ಸುಖೀ ಜೀವನ ನಡೆಸುತ್ತಿದ್ದಾರೆ. ಮೊದಲು ಸೈನಿಕ–ರಿಗೆ ಕಲ್ಲು ಹೊಡೆಯುತ್ತಿದ್ದರು. ಈಗ ಆ ಸ್ಥಿತಿಯಿಲ್ಲ. ಪ್ರಧಾನಿ ಮೋದಿ ಸರ್ಕಾರ ದೇಶ ರಕ್ಷಣೆಗೆ ಬದ್ಧವಾಗಿದೆ. ಇದಕ್ಕೆ ಆಪರೇಷನ್ ಸಿಂಧೂರ್ ಉತ್ತಮ ಉದಾಹರಣೆ ಆಗಿದೆ. ಗಡಿ ಪ್ರದೇಶದಲ್ಲಿ ಸಹ ಉಗ್ರರ ಹುಟ್ಟಡಗಿಸುತ್ತಿದ್ದೇವೆ.

ಪಶುಪತಿ–ತಿರುಪತಿ ಟೆರಿರಿಸಂ ರೆಡ್ ಆಗಿತ್ತು. ಆದರೆ ಇಂದು ಶೇ.70ರಷ್ಟು ಭಯೋತ್ಪಾದನೆ ನಿಗ್ರಹವಾಗಿದೆ. 2026ರ ವೇಳೆಗೆ ನಕ್ಸಲಿಸಂ ಅನ್ನೂ ಸಂಪೂರ್ಣ ತೊಡೆದು ಹಾಕುತ್ತೇವೆ. ಸಿಡಿಎಸ್ ರಚನೆ, ರಕ್ಷಣಾ ಪಡೆಗಳಲ್ಲಿನ ಸಮನ್ವಯತೆಯಿಂದ ಇಂದು ಆಪರೇಷನ್ ಸಿಂಧೂರ್ ಯಶಸ್ವಿಯಾಗಿದೆ.

ಪಾಕಿಸ್ತಾನದ 11 ವಾಯು ನೆಲೆಗಳಲ್ಲಿ 10ಕ್ಕೆ ಹಾನಿಯಾದ ಬಗ್ಗೆ ಪಾಕಿಸ್ತಾನವೇ ಹೇಳಿದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಮುಖಂಡರಾದ ವಿಜುಗೌಡ ಪಾಟೀಲ, ಮಾಜಿ ಶಾಸಕರಾದ ರಮೇಶ ಭೂಸನೂರ, ಸೋಮನಗೌಡ ಪಾಟೀಲ ಸಾಸನೂರ ಇತರರು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

## ಅಬಕಾರಿ ದಾಳಿ 4.05 ಲೀಟರ್ ಮದ್ಯ ವಶ



**ಇಂಡಿ :** ಅಬಕಾರಿ ಇಲಾಖೆಯು ಶಬ್ಬಿರ ಮೌಲಾಸಾಬ ಮುಲ್ಲಾ ಇತನ ಮನೆಯ ಮೇಲೆ ಅಬಕಾರಿ ದಾಳಿ ಮಾಡಿ ಒಟ್ಟು-4.05 ಲೀಟರ್ ಮದ್ಯವನ್ನು ಜಪ್ತುಪಡಿಸಿಕೊಂಡಿದ್ದಾರೆ.

ಆರೋಪಿತನಾದ ಶಬ್ಬಿರ ಮೌಲಾಸಾಬ ಮುಲ್ಲಾ ಸಾ-ಹಾಲಳ್ಳಿ ತಾ-ಚಡಚಣ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ಎಂದು ರಾಹುಲ್ ಎಸ್ ನಾಯಕ ಅಬಕಾರಿ ನಿರೀಕ್ಷಕರು ಇಂಡಿ ತಿಳಿಸಿದ್ದಾರೆ. ರವರ ನೇತೃತ್ವದಲ್ಲಿ ಶ್ರೀ ವಾದಿರಾಜ ಎನ್ ಆಶ್ರೀತ ಅಬಕಾರಿ ಉಪ ನಿರೀಕ್ಷಕರು ಇಂಡಿ ವಲಯ ರವರು ಪ್ರಕರಣವನ್ನುದಾಖಲಿಸಿಕೊಂಡರು.ಸಿಬ್ಬಂದಿಗಳಾದ, ಅಶೋಕ ಎಸ್ ಗೋಣಸಗಿ, ಶಿವಾನಂದ ಕೊಡತೆ, ಮಂಜುನಾಥ ಬಡಿಗೇರ, ಬಸವಂತ ಭೈರಗೊಂಡ, ಮಲ್ಲಪ್ಪ ಬಿರಾದಾರ, ಲಾಡ್ಲೆಮಶ್ಯಾಕ ಮಸಳಿ ದಾಳಿಯಲ್ಲಿ ಪಾಲ್ಗೊಂಡಿದರು.

## ವಿಶೇಷ ಯೋಗ ಪ್ರಾರಂಭ



**ವಿಜಯಪುರ :** ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ನಗರದ ಬಿ.ಎಲ್.ಡಿ.ಇ. ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಶರೀರವಿಜ್ಞಾನ ವಿಭಾಗದ ಯೋಗ ಮತ್ತು ವ್ಯಾಯಾಮ ವಿಜ್ಞಾನ ಕೇಂದ್ರದಲ್ಲಿ ಯೋಗ ಸಂಗಮ: ಯೋಗ ಸಮಾವೇಶ ಶಿರ್ಷಿಕೆಯಡಿ 12 ದಿನಗಳ ವಿಶೇಷ ಯೋಗ ಕಾರ್ಯಕ್ರಮ ಬುಧವಾರ ಪ್ರಾರಂಭವಾಯಿತು.

ಮೋರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ ಮತ್ತು ಕೇಂದ್ರ ಆಯುಷ್ ಸಚಿವಾಲಯ ಸಹಯೋಗದಲ್ಲಿ ಪ್ರಾರಂಭವಾಗಿರುವ ಈ ಶಿಬಿರದಲ್ಲಿ ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ. ವೈದ್ಯಕೀಯವಿದ್ಯಾರ್ಥಿಗಳಮಾನಸಿಕಆರೋಗ್ಯವನ್ನು ಉತ್ತೇಜಿಸುವ ಉದ್ದೇಶದಿಂದ ಈ ಸಾಮಾನ್ಯ ಯೋಗ ತರಬೇತಿ ಶಿಬಿರವನ್ನು ನಡೆಸಲಾಗುತ್ತಿದೆ. ಯೋಗ ಶಿಕ್ಷಕರಾದ ಮಡಿವಾಳಪ್ಪ ದೊಡ್ಡಮನಿ ಮತ್ತು ಕಾರ್ಯಕ್ರಮ ಸಂಯೋಜಕಿ ಡಾ. ಜ್ಯೋತಿ ಖೋದ್ನಾಪುರ ಈ ಸಂದರ್ಭದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಯೋಗ ತರಬೇತಿ ನೀಡಿದರು.

ಇದೇ ತಿಂಗಳು ಜೂ. 21 ರಂದು ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ "ಒಂದು ಭೂಮಿ, ಒಂದು ಆರೋಗ್ಯ"- ಎಂಬ ಥೀಮ್ ದೊಂದಿಗೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ನಡೆಯಲಿದೆ.

# ಜೂ.21ರಂದು ಜಿಲ್ಲೆಯಲ್ಲಿ ರಾಜ್ಯಮಟ್ಟದ ಯೋಗೋತ್ಸವ ದಿನಾಚರಣೆ: ಬಬಲೇಶ್ವರ

**ವಿಜಯಪುರ :** ಮಕ್ಕಳ ದೈಹಿಕ ಹಾಗೂ ಮಾನಸಿಕ ಸದೃಢತೆಗೆ ಯೋಗದ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ, ಕರ್ನಾಟಕ ಬಾಲವಿಕಾಸ ಅಕಾಡೆಮಿ ಹಾಗೂ ಆಯುಷ್ ಇಲಾಖೆ ಇವರ ಸಹಯೋಗದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯೊಂದಿಗೆ ಜೂ.21 ರಂದು ಜಿಲ್ಲೆಯಲ್ಲಿ ರಾಜ್ಯಮಟ್ಟದ ಯೋಗೋತ್ಸವ ಕಾರ್ಯಕ್ರಮ ಆಚರಿಸಲಾಗುವುದು ಎಂದು ಕರ್ನಾಟಕ ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ತಿಳಿಸಿದರು.

ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ರಾಜ್ಯಮಟ್ಟದ ಯೋಗೋತ್ಸವ ಕುರಿತು ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಪ್ರಪ್ರಥ-ಮವಾಗಿ ರಾಜ್ಯಮಟ್ಟದ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ಆಯೋಜಿಸಲಾಗುತ್ತಿದೆ. ಈ ಕಾರ್ಯಕ್ರಮಕ್ಕಾಗಿ 15 ಲಕ್ಷ ರೂ.ಗಳನ್ನು ಅಕಾಡೆಮಿ ವತಿಯಿಂದ ಒದಗಿಸಲಾಗಿದ್ದು, ಕಾರ್ಯಕ್ರಮವನ್ನುಅತ್ಯಂತ ಯಶಸ್ವಿಯಾಗಿ ಹಮ್ಮಿಕೊಳ್ಳುವ ನಿಟ್ಟಿನಲ್ಲಿ ಅಗತ್ಯ ಸಿದ್ಧತೆ ಕೈಗೊಳ್ಳಬೇಕು. ಯೋಗದಲ್ಲಿ ರಾಷ್ಟ್ರೀಯ ಹಾಗೂ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಮಕ್ಕಳಿಗೆ ಸನ್ಮಾನ ಹಾಗೂ ಜೂ.22 ರಂದು ನಗರದ ಕಂದಗಲ್ ಶ್ರೀ



ಹನುಮಂತರಾಯ ರಂಗಮಂದಿರದಲ್ಲಿ ಯೋಗದ ಕುರಿತು ಪರಿಣಿತರಿಂದ ಚಿಂತನಾಗೋಷ್ಠಿಹಾಗೂಯೋಗಪ್ರದರ್ಶನ ಹಮ್ಮಿಕೊಳ್ಳಲಾಗಿದ್ದು,ಎಲ್ಲ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯ ನಿರ್ವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಅವರು ಹೇಳಿದರು.

ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಮಾತನಾಡಿ, ಜೂ.21ರಂದು ನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮದೊಂದಿಗೆ ಜರುಗುವ ಯೋಗೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಪದವಿ ಪೂರ್ವ ಕಾಲೇಜ್, ಪ್ರೌಢಶಾಲೆ, ವಿವಿಧವಸತಿನಿಲಯಗಳುಸೇರಿದಂತೆವಿವಿಧ ಶಾಲಾ-ಕಾಲೇಜಿನ 2000 ವಿದ್ಯಾರ್ಥಿಗಳು ಭಾಗವಹಿಸಲು ಸಂಬಂಧಿಸಿದ ಅಧಿಕಾ-ರಿಗಳು ಕ್ರಮ ವಹಿಸಬೇಕು. ಪೊಲೀಸ್ ಇಲಾಖೆಯಿಂದ ಸೂಕ್ತ ಭದ್ರತಾ ವ್ಯವಸ್ಥೆ, ಕ್ರೀಡಾಂಗಣದ ಸ್ವಚ್ಛತೆ, ಅಂಬ್ಯೂಲೆನ್ಸ್ ವ್ಯವಸ್ಥೆ, ಸೇರಿದಂತೆ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾ-ರಿಗಳಿಗೆ ಅವರು ಸೂಚಿಸಿದರು.

ಯೋಗೋತ್ಸವ ಕಾರ್ಯಕ್ರಮದ ಅಂಗವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಕ್ಕಳಿಗೆ ಗುಣಮಟ್ಟದ ಟೀ ಶರ್ಟ್, ಕ್ಯಾಪ್ ಒದಗಿಸಬೇಕು. ಯೋಗದ ಮಹತ್ವ ಕುರಿತ ಕಿರುಪುಸ್ತಕವನ್ನು ಮಕ್ಕಳಿಗೆ ಒದಗಿಸುವುದು, ಕಾರ್ಯಕ್ರಮದ ವೇಳೆ ಮಳೆಬಂದಲ್ಲಿಒಳಾಂಗಣಕ್ರೀಡಾಂಗಣದಲ್ಲಿ ಪರ್ಯಾಯ ವ್ಯವಸ್ಥೆಯ ಸಿದ್ಧತೆ ಕೈಗೊಳ್ಳಬೇಕು. ಕ್ರೀಡಾಂಗಣದಲ್ಲಿ ಎಲ್‌ಇಡಿ ಪರದೆ ಅಳವಡಿಕೆ, ಕುಡಿಯುವ ನೀರು, ಅಲ್ಪೋಪಹಾರ, ಯೋಗ ಮ್ಯಾಟ್ ಸೇ-ರಿದಂತೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚಿಸಿದರು. ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಕೆ.ಕೆ.ಚವ್ಹಾಣ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಮಂಡಲೀಕ ಮಾನವರ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸಿ.ಕೆ.ಹೊಸಮನಿ, ಆಯುಷ್ ಇಲಾಖೆಯ ಡಾ. ವಿದ್ಯಾವತಿ ಅಥಣಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕಿ ಟಿ.ಎಸ್.ಕೊಲ್ಹಾರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ದೀಪಕ, ಕ್ರೀಡಾ ಇಲಾಖೆ ಅಧಿಕಾರಿ ರಾಜಶೇಖರ ಧೈವಾಡಿ ಸೇರಿದಂತೆ ವಿವಿಧ ಜಿಲ್ಲಾ ಮಟ್ಟದ ಅಧಿಕಾ-ರಿಗಳು ಉಪಸ್ಥಿತರಿದ್ದರು.

# ಎತ್ತುಗಳ ಕರಿಹರಿಯುವ ವಿಶಿಷ್ಟ ಸಂಪ್ರದಾಯ

**ಕೋಲ್ಹಾರ:** ಕೊಲ್ಹಾರಪಟ್ಟಣದಲ್ಲಿಬುಧವಾರ ವಿನೀತ ದೇಸಾಯಿ ಮನೆತನದ ಸಂಯುಕ್ತ ಆಶ್ರಯದಲ್ಲಿ ಕಾರಹುಣ್ಣಿಮೆ ಕರಿಹರಿಯುವ ಸಾಂಪ್ರದಾಯಿಕ ಕಾರ್ಯಕ್ರಮ ನಡೆಯಿತು.

ಮುಂಗಾರಿನ ಪ್ರಥಮ ಹಬ್ಬ ಕಾರಹುಣ್ಣಿಮೆ ದಿನ ರೈತರ ಹಬ್ಬವಾದ ಕಾರಹುಣ್ಣಿಮೆ ಕರಿ ಹರಿಯುವ ಸಂಪ್ರದಾಯ ಜೂನ್ 11ರಂದು ಬುಧವಾರ ಪಟ್ಟಣದಲ್ಲಿ ಆಚರಿಸಲಾಯಿತು. ಕಾರ ಹುಣ್ಣಿಮೆ ದಿನ ರೈತರೂ ತಮ್ಮ ಎತ್ತುಗಳನ್ನು ಶೃಂಗರಿಸಿ ಆ ಎತ್ತುಗಳನ್ನು ಗ್ರಾಮದ ದೇಸಾಯಿಯವರ ಮನೆಯಿಂದ ಐದು ಎತ್ತುಗಳನ್ನು ಓಟದ ಸ್ಪರ್ಧೆಯ ಮೂಲಕ ಕಾರಹುಣ್ಣಿಮೆ ಕರಿ ಹರಿಯುವ ಸಂಪ್ರದಾಯದ ಆಚರಣೆ ನಡೆದುಕೊಂಡು ಬಂದಿದೆ ಈ ವರ್ಷ ಬಳೂತಿಯ ಎತ್ತು ಮುಂದು ಬಂದಿದೆ ಎಂದು ತಾಲ್ಲೂಕು



ಜಾನಪದ ಪರಿಷತ್ ಅಧ್ಯಕ್ಷ ಮಲ್ಲಪ್ಪ ಗಣಿ ಹೇಳಿದರು.

ಪ್ರತಿಯೊಂದು ರೈತ ಕುಟುಂಬದಲ್ಲಿ ನೆಚ್ಚಿನ ಎತ್ತುಗಳನ್ನು ಶುಚಿಗೊಳಿಸಿ, ರೋಗ ರುಜಿನ ಬಾರದಂತೆ ಔಷಧೋಪಚಾರ ಮಾಡಿ, ರಂಗು ರಂಗಿನ ಬಣ್ಣ ಬಳಿದು, ಗೆಜ್ಜೆ ಸರ, ಗುಮರಿ ಸರ, ಮುತ್ತಿನ ಸರ, ಬಣ್ಣ ಬಣ್ಣದ ಹಗ್ಗಗಳಿಂದ ಎತ್ತುಗಳನ್ನು ಶೃಂಗರಿಸಿ ದೈವಿ ಸ್ವರೂಪಿ ಎಂದು ತಿಳಿದು ವಿಶೇಷ ಪೂಜೆ ಹಾಗೂ ನೈವೇದ್ಯ ಸಲ್ಲಿಸಿದರು.

ವಿಶೇಷತೆ: ಕಾರಹುಣ್ಣಿಮೆ ದಿನ ಐದು ಎತ್ತುಗಳನ್ನು ಕರಿಹರಿಯುವರು ಮೊದಲನೇದು ದೇಸಾರದು, ಎರಡನೇದು ಸರ್ಕಾರದು, ಮೂರನೇದು ಕೆಂಪು, ನಾಲ್ಕುನೇದು ಬಿಳಿ,ಐದನೇಯದು ಬಳೂತಿ ಹೀಗೆಯಾವ ಎತ್ತು ಮೊದಲು ಬರುವುದೋ ಆ ವರ್ಷ ಆ ಫಲ ಜಾಸ್ತಿ ದೊರೆಯುತ್ತದೆ ಎಂದು ರೈತರ ಭಾವನೆಯಾಗಿದೆ ಎಂದು ದೇಸಾಯಿ ಮನೆತನದ ವಿನೀತ್ ತಮ್ಮಾರಾಯ ದೇಸಾಯಿ ಹೇಳಿದರು.

ಕಾರು ಹುಣ್ಣಿಮೆ ಕರಿ ಹರಿಯುವ ಸಂಪ್ರದಾಯದಲ್ಲಿ ಕೊಲ್ಹಾರ ಪಟ್ಟಣದ ದೇಸಾಯಿ ಮನೆತನದವರು ಮತ್ತು ಸಮಸ್ತ ಗುರುಹಿರಿಯರು, ಸುತ್ತ ಮುತ್ತಲಿನ ಹತ್ತಾರು ಹಳ್ಳಿಗಳ ರೈತರು ಯುವಕರು ಭಾಗವಹಿಸಿದ್ದರು.

# ಸ್ಮಶಾನ ಭೂಮಿ ಕಬಳಿಸಲು ಯತ್ನ: ದೇವಗಿರಿ ಗ್ರಾಮಸ್ಥರ ಪ್ರತಿಭಟನೆ

**ಬೆಳಗಾವಿ :** ಕಡೋಲಿ ಗ್ರಾಪಂಗೆ ವ್ಯಾಪ್ತಿಯಲ್ಲಿ ಬರುವದೇವಗಿರಿಗ್ರಾಮದಲ್ಲಿನಲಿಂಗಾಯತ, ಸಮಾಜದ ಸ್ಮಶಾನಭೂಮಿಯನ್ನು ಕಬಳಿಸಲು ಯತ್ನ ಮಾಡಲಾಗುತ್ತಿದೆ. ರಸ್ತೆಯ ಒಂದು ಬದಿ ಲಿಂಗಾಯತ ಮತ್ತೊಂದು ಬದಿ ಮರಾಠಾ ಮತ್ತು ನಾಯಕ ಸಮಾಜದ ಸ್ಮಶಾನ ಭೂಮಿಯಿದೆ. ಈ ಎಲ್ಲ ಸ್ಮಶಾನಭೂಮಿಯನ್ನು ಕಬಳಿಸಲು ಯತ್ನ ಮಾಡಲಾಗುತ್ತಿದೆ ಎಂದು ಆರೋಪಿಸಿ ದೇವಗಿರಿಗ್ರಾಮಸ್ಥರುಸ್ಮಶಾನಭೂಮಿಯಲ್ಲೇ ಶುಕ್ರವಾರ ಪ್ರತಿಭಟನೆ ನಡೆಸಿದರು.

ಈ ವೇಳೆ ದೇವಗಿರಿ ಗ್ರಾಮಸ್ಥರು ಮಾತನಾಡಿ,ದೇವಗಿರಿ ಗ್ರಾಮದ ಸರ್ವೆ ನಂ 123/8ರಲ್ಲಿ ಬರುವ 1 ಎಕರೆ 16 ಗುಂಟೆಯ ಭೂಮಿಯನ್ನು ಲಿಂಗಾಯತ ಸಮಾಜದ ಜನರಿಗೆ ಸ್ಮಶಾನಕ್ಕೆ ಮೀಸಲಾಗಿತ್ತು. ಕಳೆದ ಸುಮಾರು ವರ್ಷಗಳಿಂದ ದೇವಗಿರಿ ಗ್ರಾಮದ ಜನರು ಮೃತಪಟ್ಟ ವ್ಯಕ್ತಿಗಳ ಶವ ಸಂಸ್ಕಾರಕ್ಕೆ ಈ ಜಾಗ ಬಳಸಿಕೊಳ್ಳುತ್ತಿದ್ದಾರೆ. ಈ ವರ್ಷ ಸಹ ಇಲ್ಲಿ ಅನೇಕ ಶವಗಳ ಅಂತ್ಯಕ್ರಿಯೆ ಮಾಡಲಾಗಿದೆ.

ಈಗ ವ್ಯಕ್ತಿಯೊಬ್ಬ ಈ ಜಾಗ ತನ್ನದೆಂದು ತಕರಾರು ತೆಗೆದು ಅಡಚಣೆ ಉಂಟುಮಾಡಿ ಈಸ್ಮಶಾನಭೂಮಿಯನ್ನುಕಬಳಿಸಲುಯತ್ನ ಮಾಡುತ್ತಿದ್ದಾನೆ ಎಂದು ಆರೋಪಿಸಿದರು.

ಈ ಜಾಗ ಸ್ಮಶಾನಕ್ಕೆ ಮೀಸಲು ಎಂದು ನಮ್ಮ ಹಿರಿಯರು ಈ ಜಾಗ ಸುಮಾರು ವರ್ಷಗಳ ಹಿಂದೇಯೇ ಗುರುತಿಸಿದ್ದಾರೆ. ಆದರೆ ಈಗ ವ್ಯಕ್ತಿಯೊಬ್ಬ ಈ ಜಾಗ ನನ್ನ ಪಿತ್ರಾರ್ಜಿತ ಆಸ್ತಿ ಎಂದು ಆರೋಪ ಮಾಡಿ ಲಿಂಗಾಯತ



ಸಮಾಜದ ಸ್ಮಶಾನ ಭೂಮಿ ಕಬಳಿಸಲು ಯತ್ನ ಮಾಡುತ್ತಿದ್ದಾನೆ. ಇದು ಸರಿಯಲ್ಲ. ಶೀಘ್ರವೇ ಈ ಆರೋಪ ಬಿಟ್ಟು ಲಿಂಗಾಯತ ಸಮುದಾಯದ ಜನರಿಗೆ ಸ್ಮಶಾನ ಭೂಮಿಯನ್ನು ಯತಾವತ್ತಾಗಿ ಮುಂದುವರೆಸಿಕೊಂಡು ಹೋಗಲು ಅನುವುಮಾಡಿಕೊಡಬೇಕೆಂದುಗ್ರಾಮಸ್ಥರು ಒತ್ತಾಯಿಸಿದರು.

ಇವತ್ತು ಕಡೋಲಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ದೇವಗಿರಿ ಗ್ರಾಮದಲ್ಲಿ ಸ್ಮಶಾನ ಭೂಮಿಯು ಬಹಳ ದಿನಗಳಿಂದ ತಕರಾರದಲ್ಲಿತ್ತು ಇವತ್ತು ಈ ಭೂಮಿಯನ್ನು ಅತಿಕ್ರಮಣವಾಗಿ ಸರ್ವೆ ಮಾಡಲು ಬಂದಿದ್ದರು.

ಗ್ರಾಮದಸಮಸ್ತನಾಗರಿಕರುಕೂಡಿಕೊಂಡು ಇದನ್ನು ಮೋಜ ಮಾಪ ಮಾಡಲು ತಕರಾರು ಇದೆ ಅಂತ ಹೇಳಿದರು. ಈ ಒಂದು ಸ್ಥಳಕ್ಕೆ ಅಕಖು ಕಖಖು ಹಾಗೂ ಅವರ ಸಿಬ್ಬಂದಿ ಹಾಜರಿದ್ದರು ಕಆಓ ತಲಾಟಿ ಸರ್ಕಲ ಡೆಪೋಟಿ ತಹಸೀಲ್ದಾರ್ ಹಾಗೂ ಸತೀಶಣ್ಣಾ ಜಾರಕಿಹೊಳಿಯವರ ಆಪ್ತ ಸಹಾಯಕರಾದ ಮಲ್ಲಗೌಡಾ ಪಾಟೀಲರು ಗ್ರಾಮ ಪಂಚಾಯಿತಿ ಅಧಕ್ಷರು ಸದಸ್ಯರು ಎಲ್ಲರೂ ಹಾಜರಾಗಿ ಇವತ್ತಿನ ಪರಸ್ಥಿತಿ ನಿಭಾಯಿಸಿದರು.

ಲೋಕೋಪಯೋಗಿ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿಯವರ ಆಪ್ತ ಸಹಾಯಕ ಮಲಗೌಡ ಪಾಟೀಲ್ ಅವರ ಬಳಿ ತಮ್ಮ ನೋವುತೊಡಿಕೊಂಡಗ್ರಾಮಸ್ಥರು,ದೇವಗಿರಿ ವ್ಯಾಪ್ತಿಯ ಕಡೋಲಿ ಗ್ರಾಪಂನ ರಿ.ಸ.ನಂ-123/8 ರಲ್ಲಿ ಸಂಬಂಧಿಸಿದ ಭೂಮಿಯನ್ನು ಕಳೆದ ಮೂರ್ನಾಲ್ಕು ತಲಮಾರಿನಿಂದ ನಾವು ಸ್ಮಶಾನ ಭೂಮಿಯಾಗಿ ಬಳಕೆ ಮಾಡುತ್ತಿದ್ದೇವೆ. ಹೀಗಾಗಿ ಮುಂದೆಯೂ ನಮಗೆ ಈ ಜಾಗವನ್ನು ಬಳಕೆ ಮಾಡಲು ಅನುವು ಮಾಡಿಕೊಡಬೇಕೆಂದು ಮನವಿ ಮಾಡಿದರು.

ಸಮಸ್ಯೆ ಆಲಿಸಿದ ಸಚಿವರ ಆಪ್ತ ಸಹಾಯಕ ಮಲಗೌಡಾ ಪಾಟೀಲ ಅವರು ಗ್ರಾಮಸ್ಥರಿಗೆ ನ್ಯಾಯ ಒದಗಿಸುವ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಗೌಡಪ್ಪ ಶಿವನಗೌಡ ಪಾಟೀಲ, ಬಾಬುರಾವ ಪಾಟೀಲ, ಬಾಬು ಪಾಟೀಲ, ನಿಂಗಪ್ಪ ಪಾಟೀಲ, ಪಕ್ಕಿರಪ ಸದಾವರ, ತಿಪ್ಪಣ್ಣಾ ಪಕ್ಕಿರನಾಯಕ, ಬಾಬು ಬಡಿಗೇರ, ಮಂಜುಳಾ ಅಂಕಿ, ರೇಖಾ ಸುತಾರ ಸೇರಿದಂತೆ ದೇವಗಿರಿ ಗ್ರಾಮದ ಗ್ರಾಮಸ್ಥರು ಭಾಗವಹಿಸಿದ್ದರು.

# "ರಾಷ್ಟ್ರೀಯ ಲೋಕ ಅದಾಲತ್" ಜುಲೈ 12 ರಂದು: ಸಂದೀಪ ಪಾಟೀಲ

**ಬೆಳಗಾವಿ** ಜಿಲ್ಲೆಯಾದ್ಯಂತಜುಲೈ12ರಂದು"ರಾಷ್ಟ್ರೀಯ ಲೋಕ ಅದಾಲತ್" ಹಮ್ಮಿಕೊಳ್ಳಲಾಗುತ್ತಿದ್ದು, ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಂದೀಪ ಪಾಟೀಲ ಅವರು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಹೊಸ ನ್ಯಾಯಾಲಯಗಳ ಸಂಕೀರ್ಣದ ಆವರಣದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕಚೇ-ರಿಯ ಸಭಾಂಗಣದಲ್ಲಿ ಶುಕ್ರವಾರ (ಜೂ.13) ನಡೆದ ರಾಷ್ಟ್ರೀಯ ಲೋಕ ಅದಾಲತ್ ಕುರಿತು ಆಯೋಜಿಸಲಾದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

ದೇಶದಾದ್ಯಂತ ಲೋಕ್ ಅದಾಲತ್ ಜುಲೈ 12 ರಂದು ನಡೆಯಲಿದ್ದು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಅದಾಲತ್ ಹಮ್ಮಿಕೊಳ್ಳಲಾಗಿದೆ. ಪ್ರಸ್ತುತ ಚಾಲ್ತಿಯಲ್ಲಿರುವ ಆಸ್ತಿಪಾಲು ವಿಭಾಗ, ಜೀವನಾಂಶ, ಚೆಕ್ ಬೌನ್ಸ್, ವಿದ್ಯುತ್ ಪ್ರಕರಣ, ಕಂದಾಯ ಅಪರಾಧಿತ ಪ್ರಕರಣಗಳಲ್ಲಿ ರಾಜಿ ಮಾಡಿಕೊಳ್ಳುವಂತಹ ಪ್ರಕರಣ, ಕಾರ್ಮಿಕರ, ಬ್ಯಾಂಕ್ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥ ಮಾಡಲು ಅವಕಾಶ ಇರುತ್ತದೆ ಎಂದು ಹೇಳಿದರು.

ಲೋಕ ಅದಾಲತ್ ನಲ್ಲಿ ಸುಮಾರು ವರ್ಷಗಳಿಂದ ಬಾಕಿ ಇರುವ ಪ್ರಕಣಗಳ ಇತ್ಯರ್ಥಕ್ಕೆ ಅವಕಾಶ



ಕಲ್ಪಿಸಲಾಗುವುದು. ಇದರಿಂದ ನ್ಯಾಯಾಲಯಕ್ಕೆ ಅಲೆದಾಡುತ್ತಿರುವ ಕಕ್ಷಿದಾರರ ಹಣ, ಸಮಯ ಉಳಿತಾಯದ ಜೊತೆಗೆ ತ್ವರಿತ ಗತಿಯಲ್ಲಿ ಪರಿಹಾರ ಕಲ್ಪಿಸಲು ಸಹಾಯವಾಗಲಿದೆ.

ಜಿಲ್ಲೆಯ ನಡೆಯುವ ಪ್ರತಿ ನ್ಯಾಯಾಲಯಗಳಲ್ಲಿ ಲೋಕ್ ಅದಾಲತ್ ನಲ್ಲಿ ಸುಮಾರು 1 ಲಕ್ಷ 37 ಸಾವಿರ ಬಾಕಿ ಪ್ರಕರಣಗಳಿವೆ. ಇದರಲ್ಲಿ ಸುಮಾರು 12 ಸಾವಿರ ಪ್ರಕರಣಗಳು ವಿಲೇವಾರಿಗೊಳಿಸಲು ಕೈಗೆತ್ತಿಕೊಳ್ಳಲಾಗುವುದು. ಅಂದಾಜು 13 ಸಾವಿರ ಪ್ರಕರಣಗಳು ಈಗಾಗಲೇ ರಾಜೀಯಾಗಿವೆ ಎಂದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಪ್ರತಿ ತಿಂಗಳು ಲೋಕ್ ಅದಾಲತ್ ಕುರಿತು 5 ರಿಂದ 6 ಜಾಗೃತಿ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗುತ್ತಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಂದೀಪ ಪಾಟೀಲ ಅವರು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

# ರಕ್ತದಾನ ಶ್ರೇಷ್ಠ ದಾನಗಳಲ್ಲಿ ಒಂದು: ಡಾ. ಶ್ರೀದೇವಿ ಪಾಟೀಲ

**ಬೆಳಗಾವಿ:** ಸಾಮಾಜಿಕಸೇವೆಯಲ್ಲಿ ರಕ್ತದಾನವು ಶ್ರೇಷ್ಠ ದಾನವಾಗಿದ್ದು ನಿಯಮಿತವಾಗಿ ಮಾಡಬೇಕು. ಜೀವಾಪಾಂಯದಲ್ಲಿರುವ ವ್ಯಕ್ತಿಯನ್ನು ಬದುಕಿಸಿದ ಪುಣ್ಯ ನಿಮ್ಮದಾಗುವುದು. ರಕ್ತದಾನದ ಮಹತ್ವವನ್ನು ಎಲ್ಲರೂ ಅರಿಯಬೇಕೆಂದು ವೈದ್ಯಾಧಿಕಾರಿ ಡಾ.ಶ್ರೀದೇವಿ ಪಾಟೀಲ ಹೇಳಿದರು.



ಅವರು ವಿಶ್ವ ರಕ್ತದಾನಿಗಳ ದಿನ ಅಂಗವಾಗಿ ಲಿಂಗರಾಜ ಕಾಲೇಜಿನ ಎನ್‌ಸಿಸಿಘಟಕವುಆಯೋಜಿಸಿದ್ದ ವಿಶೇಷ ಉಪನ್ಯಾಸದಲ್ಲಿ ಪಾಲ್ಗೊಂಡು ಮಾತನಾಡಿದರು.

ಇಂದು ರಕ್ತದಾನಿಗಳ ಅಗತ್ಯತೆ ಹೆಚ್ಚಾಗಿದ್ದು ರಕ್ತದಾನವನ್ನು ಮಾಡಬೇಕು. ಜೀವಮರಣದ ನಡುವೆ ಹೋರಾಡುವ ರೋಗಿಗೆ ರಕ್ತದ ಅವಶ್ಯಕತೆ ಹೆಚ್ಚಾಗಿರುತ್ತದೆ. ರಕ್ತ ಅಪಘಾತದಂತಹ ಸಂದರ್ಭದಲ್ಲಿ, ಹೆರಿಗೆ ಸಮಯದಲ್ಲಿ, ರಕ್ತಹೀನತೆಯಿಂದ ಬಳಲುತ್ತಿರುವ ರೋಗಿಗಳಿಗೆ ರಕ್ತದ ಅವಶ್ಯಕತೆ ಬಹಳವಾಗಿರುತ್ತದೆ. ಅವರಪ್ರಾಣವನ್ನುಕಾಪಾಡುವುದು ನಾಗರಿಕನ ಕರ್ತವ್ಯ. ಅದಕ್ಕಾಗಿ ರಕ್ತದಾನವನ್ನು ಮಾಡಬೇಕು ಎಂದರು.

ಎನ್‌ಸಿಸಿ ಅಧಿಕಾರಿ ಮೇಜರ್ ಡಾ.ಮಹೇಶ ಗುರನಗೌಡರ ಮಾತನಾಡಿ, ರಕ್ತದಾನವನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಮಾಡುವುದರಿಂದ ಯಾವುದೇ ತೊಂದರೆಗಳು ಇಲ್ಲ. ಇದರಿಂದ ಆರೋಗ್ಯವನ್ನು ನಾವು ಮತ್ತಷ್ಟು ಸುಧಾರಿಸಬಹುದು. ಯಾವುದೇ ಹೃದಯಸಂಬಂಧಿಕಾಯಿಲೆಗಳು, ಕ್ಯಾನ್ಸರ್ ಸಂಬಂಧಿ ಕಾಯಿಲೆಗಳು ಹತ್ತಿರವೂ ಬರುವುದಿಲ್ಲ. ನಾವು ರಕ್ತದಾನವನ್ನು ಮಾಡಿದರೆ ದೇಹ ಮತ್ತಷ್ಟು ಸದೃಢಗೊಳ್ಳುವುದೆಂದು ತಿಳಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯ ಡಾ.ಎಚ್.ಎಸ್.ಮೇಲಿನಮನಿಯವರು ಮಾತನಾಡಿ, ಉತ್ತಮವಾದ ಆಹಾರವನ್ನು ಸರಿಯಾದ ಸಮಯಕ್ಕೆ ತೆಗೆದುಕೊಂಡರೆ ದೇಹ ಸ್ವಾಸ್ಥ್ಯದಿಂದ ಕೂಡಿರುತ್ತದೆ. ರಕ್ತದಾನದಂಥಹ ಸಾಮಾಜಿಕ ಸೇವಾಕಾರ್ಯದಲ್ಲಿ ತೊಡಗಿಸಬೇಕು. ವೈದ್ಯವಿಜ್ಞಾನವು ನಿಯಮಿತ ರಕ್ತದಾನವನ್ನು ಮಾಡುವ ಸರಳ ಆರೋಗ್ಯ ಸೂತ್ರಗಳನ್ನು ತಿಳಿಸಿಕೊಟ್ಟಿದೆ. ಅದೊಂದು ಶ್ರೇಷ್ಠವಾದ ದಾನವಾಗಿದ್ದು ಯುವಜನಾಂಗ ರಕ್ತದಾನಕ್ಕೆಮುಂದೆಬರಬೇಕೆಂದು ಕರೆನೀಡಿದರು. ಎಲ್ಲ ಕೆಡೆಟ್‌ಗಳಿಗೆ ರಕ್ತದಾನ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು. ಕೆಡೆಟ್ ವೈಷ್ಣವಿ ಮಾಳಿ ನಿರೂಪಿಸಿದರು. ಕೆಡೆಟ್ ಧೀರಜ್ ಭಾವಿಕಟ್ಟಿ ವಂದಿಸಿದರು.


## ಕೆಎಲ್‌ಇ ಸಮಾಜಶಾಸ್ತ್ರ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ



**ಬೆಳಗಾವಿ :** ಜೂ. 12ರಂದು ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ, ಬೆಳಗಾವಿಯ ಸಮಾಜಶಾಸ್ತ್ರ ವಿಭಾಗದಿಂದ ಶೈಕ್ಷಣಿಕ ಪ್ರವಾಸವನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಶೈಕ್ಷಣಿಕ ಪ್ರವಾಸವನ್ನು ತಟ್ಟಿಗೆರ, ಹಳಿಯಾಳ ತಾಲ್ಲೂಕು ಮತ್ತು ಕಣ್ಣಿಗೇರ, ಯಲ್ಲಾಪುರ ತಾಲ್ಲೂಕು ಈ ಸ್ಥಳಗಳಿಗೆ ಒಂದು ದಿನದ ಶೈಕ್ಷಣಿಕ ಪ್ರವಾಸವನ್ನು ಹಮ್ಮಿಕೊಳ್ಳಲಾಗಿ-ತ್ತು. ಈ ಸ್ಥಳಗಳಲ್ಲಿನ ಸಿದ್ಧಿ ಬುಡಕಟ್ಟು ಸಮೂಹಗಳ ಬುಡಕಟ್ಟು ಆಧ್ಯಯನ ಮತ್ತು ಸಾಮಾಜಿಕ ಸ್ತರವಿನ್ಯಾಸ ಮತ್ತು ಸಾಮಾಜಿಕ ಚಾಲನಶೀಲತೆಯನ್ನು ಅಧ್ಯಯನ ಮಾಡಲಾಯಿತು. ಈ ಪ್ರವಾಸದಲ್ಲಿ ಸಮಾಜಶಾಸ್ತ್ರ ವಿಭಾಗದಮುಖ್ಯಸ್ಥರಾದ.ಡಾ.ರವಿಎಸ್.ದಳವಾಯಿ, ಸಹ ಪ್ರಾಧ್ಯಾಪಕರು ಹಾಗೂ ಡಾ. ಮಂಜುಳಾ ಜಿ. ಕೆ. ಸಹಾಯಕ ಪ್ರಾಧ್ಯಪಕರು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು, ಸಂಶೋಧನಾರ್ಥಿಗಳು ಭಾಗವಹಿಸಿದ್ದರು.

# ಅಂತಃಕರಣ ಮಿಡಿಯುವ ಕತೆ ಹೊಂದಿದ 'ಚುರಮುರಿಯಾ' ಕನ್ನಡ ಚಲನಚಿತ್ರ

ಶುಕ್ರವಾರ ಜೂನ್ 13 ರಂದು ರಾಜ್ಯಾದ್ಯಂತ ತೆರೆ ಕಂಡ ಎಸ್. ಜೆ. ಫಿಲ್ಮ್ ಅವರ " ಚುರಮು-ರಿಯಾ" ಕನ್ನಡ ಚಲನ ಚಿತ್ರದ ಮೂಲ ಕತೆ ಬೆಳಗಾವಿಯ ಹಿರಿಯ ಬರೆಹಗಾರ್ತಿ ಶ್ರೀಮತಿ ನೀಲಗಂಗಾ ಚರಂತಿಮಠ ಅವರದು. ರಬಕವಿ ನಗರದ ಸುಪ್ರಿಯಾ ನಿಪ್ಪಾಣಿ ಅವರ ನಿರ್ದೇಶನದ ಈ ಚಿತ್ರ ಎರಡು ಪ್ರಮುಖ ಪಾತ್ರಗಳ ಮೇಲೆ ಕೇಂದ್ರಿತವಾಗಿದೆ.




ಒಬ್ಬ ಚುರಮುರಿ ಮಾರುವ ರಾಮಚಂದ್ರ . ಇನ್ನೊಬ್ಬಳು ಕತೆಗಾರ್ತಿ. ರಾಮಚಂದ್ರ ಸೈಕಲ್ ಮೇಲೆ ಊರು ಸುತ್ತುತ್ತ ಚುರಮುರಿ ಮಾರಾಟ ಮಾಡಿ ತನ್ನ ಬದುಕು ಸಾಗಿಸುತ್ತಿರುವವ. ಸೊಸೆಯ ಕಿರುಕುಳದ ಕಾರಣದಿಂದ ಸ್ವಂತದ ಹತ್ತೆಕರೆ ಹೊಲ ಮನೆ ಇದ್ದರೂ ಸ್ವಾಭಿಮಾನಿಯಾಗಿ ಸ್ವತಂತ್ರ ಜೀವನ ನಡೆಸಲು ತಾನಾಗಿ ಮನೆ ಬಿಟ್ಟು ಒಬ್ಬನೇ ಒಂದು ಗುಡಿಸಲಲ್ಲಿರುವವ. ಆದರೆ ತನ್ನ ಯಾವ ತೊಂದರೆಯನ್ನೂ ಬೇರೆಯವರಿಗೆಹೇಳಲುಹೋಗದೆ ಸಂತೋಷದಿಂದ ಮತ್ತು ನಿರ್ಲಿಪ್ತ ಮನೋಭಾವದಿಂದ ನಗುನಗುತ್ತ ಇರುವವ.

ಚುರಮುರಿ ಮಾರುತ್ತ ತಿರುಗುವ ರಾಮಚಂದ್ರ ಓರ್ವ ಅರವತ್ತರ ಪ್ರಾಯದ ಕತೆಗಾರ್ತಿಯ ಮನೆಗೆ ಬರುತ್ತಾನೆ. ತನ್ನ ಕತೆಗಾಗಿ ಅವಳು ರಾಮಚಂದ್ರನ ಕುಟುಂಬ ಮತ್ತು ಉದ್ಯೋಗದ ವಿಷಯ ವಿಚಾರಿಸಿದಾಗ ಆತ ವಾಸ್ತವ ಸಂಗತಿಯನ್ನುಬಚ್ಚಿಟ್ಟುತಾನುತನ್ನ ಹೆಂಡತಿ ಮಗ ಸೊಸೆ ಮೊಮ್ಮಕ್ಕಳ ಸಂಗಡ ಸುಖವಾಗಿರುವುದಾಗಿ ಹೇಳುತ್ತಾನೆ. ಆ ಲೇಖಕಿ ಅವನ ಕುರಿತಾಗಿಯೇ ಕತೆ ಬರೆದು ಪ್ರಕಟಿಸುತ್ತಾಳೆ. ತನ್ನದೇ ಕತೆ ಪ್ರಕಟವಾಗಿದೆಯೆಂದು ತಿಳಿದು ರಾಮಚಂದ್ರ ಖುಷಿ ಪಡುತ್ತಾನೆ.

ಅತ್ತ ಕತೆಗಾರ್ತಿಯೂ ರಾಮಚಂದ್ರನಿಗೆ ತನ್ನ ಕುಟುಂಬಕ್ಕೆ ಸಂಬಂಧಿಸಿದ ವಾಸ್ತವ ವಿಚಾರಗಳನ್ನು ತಿಳಿಸದೇ ತನ್ನ ನೋವನ್ನುತಾನೇನುಂಗಿಕೊಂಡು ತಾನೂಮಕ್ಕಳುಮೊಮ್ಮಕ್ಕಳೊಡನೆ ಆರಾಮಾಗಿರುವುದಾಗಿ ಹೇಳು ತ್ತಾಳೆ. ಆತ ನಂಬಿರುತ್ತಾನೆ. ಆದರೆ ಒಂದು ದಿನ ಚುರಮುರಿ ಮಾರಲು ಅವಳ ಮನೆಗೆ ಹೋದಾಗ ಅವಳು ಅನಾಥಸಾವನ್ನಪ್ಪಿರುವುದುತಿಳಿದು ಅವನಿಗೆ ಆಘಾತವಾಗುತ್ತದೆ.

ಕೆಲವೊಮ್ಮೆ ನಾವು ತಿಳಿದುಕೊಂಡಿರುವುದೇ ಒಂದು, ವಾಸ್ತವವಾಗಿ ಇರುವುದೇ ಮತ್ತೊಂದು. ಆದರೂ ಮನುಷ್ಯರು ಒಂದು ಬಗೆಯ ಭ್ರಮೆಯಲ್ಲೇ ಬದುಕುತ್ತಿರುತ್ತಾರೆ. ಕೆಲವರು ತಮ್ಮ ನೈಜ ಸ್ಥಿತಿ ಇತರರಿಗೆ ತಿಳಿಯಬಾರದೆಂದು ಬಯಸುತ್ತಾರೆ. ಕೆಲವರು ಇರುವುದನ್ನೇ ಸುಖವೆಂದು ಭಾವಿಸಿಕೊಂಡು ತಮ್ಮಷ್ಟಕ್ಕೆ ಬದುಕುತ್ತಿರುತ್ತಾರೆ. ಇನ್ನುಕೆಲವರು ತಮ್ಮ ವಾಸ್ತವ ಸ್ಥಿತಿಯನ್ನು ಮುಚ್ಚಿಟ್ಟು ತಾವು ನೆಮ್ಮದಿಯಿಂದ ಇದ್ದೇವೆಂದು ತೋ-ರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಮನುಷ್ಯಸ್ವಭಾವದ ವಿಭಿನ್ನ ಮುಖಗಳಿವು.

ಈ"ಚುರಮುರಿಯಾ"ಕತೆನಿಜವಾಗಿ ನಡೆದ ಒಂದು ಘಟನೆಯ ಮೇಲೆ ರಚನೆಯಾಗಿದೆ ಎನ್ನಲಾಗಿದ್ದು, ಚುರುಮುರಿ ಮಾರುವವನ ಬದುಕು ಮತ್ತು ವ್ಯಕ್ತಿತ್ವವನ್ನು ಅತ್ಯಂತ ಹೃದಯಸ್ಪರ್ಶಿಯಾಗಿ ಚಿತ್ರಿಸಲಾಗಿದೆ. ರಾಮಚಂದ್ರನ ಪಾತ್ರದಲ್ಲಿ ಮಹಾದೇವ ಹಡಪದ ಅವರ ಅಭಿನಯ ಎಲ್ಲರ ಮೆಚ್ಚುಗೆಗೆ ಪಾತ್ರವಾಗುತ್ತದೆ. ಕತೆಗಾರ್ತಿಯಾಗಿ ಜಮಖಂಡಿಂ-ಯ ನಿವೃತ್ತ ಶಿಕ್ಷಕಿ, ಸಾಹಿತಿ ಶ್ರೀಮತಿ ಶಾರದಾ ಮಳ್ಳೂರ ಅವರದೂ ಪಾತ್ರೋಚಿತ ಅಭಿನಯ. ಇಲ್ಲಿ ಸಣ್ಣ ಪುಟ್ಟ ಇತರ ಕೆಲ ಪಾತ್ರಗಳಿಗೆ ಅಷ್ಟೊಂದು ಮಹತ್ವ ಇಲ್ಲ. ಎರಡೇ ಪಾತ್ರಗಳಲ್ಲಿ ಎರಡು ತಾಸಿನ ಸಿನಿಮಾವನ್ನು ಸರಾಗವಾಗಿ ಕೊಂಡೊಯ್ದಿರುವುದು ನಿರ್ದೇಶಕರ ತಾಕತ್ತು. ಛಾಯಾಗ್ರಹಣವೂ ಚೆನ್ನಾಗಿದೆ. ಯಾವ ಅಬ್ಬರ ಆಡಂಬರ ಇಲ್ಲದ ಬಹಳ ಸರಳವಾದ ಮತ್ತು ಹೃದ್ಯವಾದ ಚಿತ್ರವನ್ನು ಕನ್ನಡಿಗರು ಥಿಯೇಟರಿಗೆ ಹೋಗಿ ಬೆಳ್ಳಿ ತೆರೆಯ ಮೇಲೆ ನೋಡಿ ಆನಂದಿಸಿ ಉತ್ಸಾಹಿಹೊಸಬರಪ್ರಯತ್ನವನ್ನು ಪ್ರೋತ್ಸಾಹಿಸಬೇಕಾಗಿದೆ. ಉತ್ತರ ಕರ್ನಾಟಕದ ಪ್ರತಿಭಾವಂತರನ್ನು ಚಲನಚಿತ್ರರಂಗ ಸರಿಯಾಗಿ ಬಳಸಿಕೊಳ್ಳುವುದೂ ಅಷ್ಟೇ ಮುಖ್ಯ. ಬೆಳಗಾವಿಯ ಹಿರಿಯ ಲೇಖಕಿ ನೀಲಗಂಗಾ ಚರಂತಿಮಠ ಅವರಿಗೆ, ರಬಕವಿಯ ಸುಪ್ರಿಯಾ ನಿಪ್ಪಾಣಿ ಅವರಿಗೆ ಮತ್ತು ಉಳಿದೆಲ್ಲ ಚಿತ್ರ ತಂಡದವರಿಗೆ ಅಭಿನಂದನೆಗಳು.

–ಎಲ್. ಎಸ್. ಶಾಸ್ತ್ರಿ.

# ಶಿವಶಿಂಪಿ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಭೂಮಿಪೂಜೆ

## ಹಂತ ಹಂತವಾಗಿ ಎಲ್ಲ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಕ್ರಮ; ಶಾಸಕ ಚಿಮ್ಮನಕಟ್ಟಿ

**ಬಾದಾಮಿ :** ಹಂತ ಹಂತವಾಗಿ ಎಲ್ಲ ಸಮಾಜದ ಸಮುದಾಯ ಭವನಗಳನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.


ಅವರು ನಗರದ ಎ.ಪಿ.ಎಂ.ಸಿ. ಹತ್ತಿರ ಶಿವಶಿಂಪಿ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಮಂಗಳವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ಶಿವಶಿಂಪಿ ಸಮಾಜ ಶ್ರಮಿಕ ಸಮಾಜವಾಗಿದ್ದು, ತಮ್ಮ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಭವಿಷ್ಯದಲ್ಲಿ ಉತ್ತಮ ಪ್ರಜೆಗಳನ್ನಾಗಿ ಮಾಡಬೇಕು ಎಂದು ಸಲಹೆ ನೀಡಿದರು.



ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಪಾಂಡಪ್ಪ ಕಟ್ಟಿಮನಿ, ಸದಸ್ಯ ಮಂಜುನಾಥ ಹೊಸಮನಿ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಶಿವುಕುಮಾರ ಹೀರೆಮಠ, ಶಿವಶಿಂಪಿ ಸಮಾಜದ ತಾಲೂಕಾಧ್ಯಕ್ಷ ನಾಗಪ್ಪ ಶಿವಣಗಿ, ಮುಖಂಡರಾದ ಬಸವಂತಪ್ಪ ಶಿವಶಿಂಪಿ, ಚನಬಸಪ್ಪ ಅಥಣಿ, ಶಿವಪುತ್ರಪ್ಪ ಶಿರಸಿ, ಗಣೇಶ ಕುಬಸದ, ರಮೇಶ ಹೆಬ್ಬಳ್ಳಿ, ಚಂದ್ರು ಸೂಡಿ, ಉಮೇಶ ತಾಳಿಕೋಟಿ, ಅಶೋಕ ಶಿವಶಿಂಪಿ, ಸೇರಿದಂತೆ ಸಮಾಜದ ಎಲ್ಲ ಬಾಂಧವರು ಹಾಜರಿದ್ದರು.

# ಡಾ. ಸತ್ಯಾನಂದ ಪಾತ್ರೋಟ ಅವರಿಗೆ 'ಹುಲಗಬಾಳಿ ಶರಣಶ್ರೀ' ಪ್ರಶಸ್ತಿ

**ಬನಹಟ್ಟಿ :** ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ಜಿಲ್ಲಾ ಘಟಕ ಬಾಗಲಕೋಟೆ, ತಾಲೂಕಾ ಘಟಕ ರಬಕವಿ-ಬನಹಟ್ಟಿ, ವಲಯಗಳು ತೇರದಾಳ, ಮಹಾಲಿಂಗಪುರ ಹಾಗೂ ಬಸವ ಸಂಪದ ಬಳಗ ಬನಹಟ್ಟಿ ಇವರ ಸಂಯುಕ್ತಾಶ್ರಯದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ದಿವಂಗತ ಆರ್. ಎಸ್. ಹುಲಗಬಾಳಿ ಶರಣಶ್ರೀ ಪ್ರಶಸ್ತಿ ಪ್ರದಾನ ಮತ್ತು ದತ್ತಿನಿಧಿ ಉಪನ್ಯಾಸ ಸಮಾರಂಭವನ್ನು ರಬಕವಿ-ಬನಹಟ್ಟಿ ಸರಕಾರಿ ಪ್ರಥಮ ದರ್ಜೆ ಪದವಿ ಮಹಾವಿದ್ಯಾಲಯದಲ್ಲಿ ಜುಲೈತಿಂಗಳಿನಲ್ಲಿಹಮ್ಮಿಕೊಳ್ಳಲಾಗುವುದೆಂದು ಕಸಾಪ ತಾಲೂಕಾ ಅಧ್ಯಕ್ಷ ಮ. ಕೃ. ಮೇಗಾಡಿ, ಬಸವ ಸಂಪದ ಬಳಗದ ಅಧ್ಯಕ್ಷ ಕಿರಣ ಆಳಗಿ ತಿಳಿಸಿದ್ದಾರೆ.



ಪತ್ರಿಕೆಯೊಂದಿಗೆ ಮಾತನಾಡಿದ ಅವರು ಬಾಗಲಕೋಟೆಯ ಹಿರಿಯ ಸಾಹಿತಿಗಳು, ಜಾಜಿಮಲ್ಲಿಗೆ ಖ್ಯಾತಿ ಕವಿ, ಡಾ. ಸತ್ಯಾನಂದ ಪಾತ್ರೋಟ ಅವರಿಗೆ ಹುಲಗಬಾಳಿ ಶರಣಶ್ರೀ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದೆಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಬಸವ ಸಂಪದ ಬಳಗದ ಗೌರವಾಧ್ಯಕ್ಷರು, ಹಿರಿಯ ಸಾಹಿತಿ ಮಲ್ಲಿಕಾರ್ಜುನ ಹುಲಗಬಾಳಿ, ತಾಲೂಕಾ ಕಸಾಪ ಮಾಧ್ಯಮ ಕಾರ್ಯದರ್ಶಿ ಮಲ್ಲಿಕಾರ್ಜುನ ತುಂಗಳ, ಗೌರವ ಕಾರ್ಯದರ್ಶಿ ಶ್ರೀಶೈಲ ಬುರ್ಲಿ, ಸಂಘಟನಾ ಕಾರ್ಯದರ್ಶಿ ಈರಣ್ಣ ಗಣಮುಖಿ, ಶರತ್ಚಂದ್ರ ಜಂಬಗಿ ಪಾಲ್ಗೊಂಡಿದ್ದರು.

# ನಿವೃತ್ತಿ ಎನ್ನುವುದು ಎಲ್ಲ ನೌಕರರಿಗೆ ಬರುವ ಒಂದು ಘಟ್ಟ

**ಮೂಡಲಗಿ :** ನಿವೃತ್ತಿ ಎನ್ನುವುದು ಪ್ರತಿಯೊಬ್ಬ ನೌಕರನ ಜೀವನದಲ್ಲಿ ಬರುವಂತಹ ಒಂದು ಘಟ್ಟ. ನಿವೃತ್ತಿಯಾದ ನಂತರ ಹಲವು ಜವಾಬ್ದಾರಿಗಳು ಮನುಷ್ಯನಿಗೆ ಹೆಚ್ಚಾಗುತ್ತವೆ. ಕಿರಿಯರಿಗೆ ಮಾರ್ಗದರ್ಶನ, ಸಮಾಜ ಸೇವೆ, ಕುಟುಂಬಕ್ಕೆ ಸಮಯ ನೀಡುವದು ಇವುಗಳ ನಿರ್ವಹಣೆಯಲ್ಲಿ ಬಹಳ ಖುಷಿಯಾಗಿ ಜೀವನ ಸಾಗಿಸಬೇಕು ಎಂದು ಕುರುಹಿನಶೆಟ್ಟಿ ಕ್ರೆಡಿಟ್ ಸೊಸೈಟಿಯ ಅಧ್ಯಕ್ಷ ಸುಭಾಸ ಬೆಳಕೂಡ ಹೇಳಿದರು.

ನಗರದ ನೀಲಕಂಠ ಮಠದಲ್ಲಿ ಮೂಡಲಗಿ ಶಿಕ್ಷಣ ಸಂಸ್ಥೆಯಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ಇತ್ತೀಚೆಗೆ ನಿವೃತ್ತಿಯಾದ ನಾಗರಾಜ ಗುಂಡಗಡಗಿ ಅವರನ್ನು ಕುರುಹಿನಶೆಟ್ಟಿ ಸಮಾಜದ ಪರವಾಗಿ ಸನ್ಮಾನಿಸಿ ಅವರು ಮಾತನಾಡಿದರು.

ಕುರುಹಿನಶೆಟ್ಟಿ ಸಮಾಜದ ಅಧ್ಯಕ್ಷ ಈಶ್ವರ ಮುರಗೋಡ ಮಾತನಾಡಿ, ನಿವೃತ್ತಿಯಾದ ನಂತರನಾವುಸಮಾಜಮುಖಿಕಾರ್ಯಗಳೆಡೆಗೆ ಮುಖಮಾಡಿ ಸಮಾಜದ ಏಳ್ಗೆಯ ಜೊತೆಗೆ ಕಿರಿಯರಿಗೆ ಮಾರ್ಗದರ್ಶನ ಮಾಡುತ್ತಾ ಇರಬೇಕು ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಪ್ರೊ . ನಾಗರಾಜಗುಂಡಗಡಗಿಸಮಾಜನಮ್ಮಜೊತೆಗೆ ಇರುವಂತದ್ದು ನಮ್ಮ ಸೌಭಾಗ್ಯ. ಸಮಾಜದ ಕಾಳಜಿ ನೋಡಿ ನಾನು ಭಾವುಕನಾಗಿದ್ದೇನೆ. ಸದಾ ಸಮಾಜದೊಂದಿಗೆ ಇರುತ್ತೇನೆ ಎಂದರು. ಗುರು ನೀಲಕಂಠ ಮಠದ ಶಿವಾನಂದ ಶ್ರೀಗಳು ಸಾನಿಧ್ಯ ವಹಿಸಿದ್ದರು.

ಈ ಸಮಯದಲ್ಲಿ ಗೊಡಚೆಪ್ಪ ಮುರಗೋಡ, ಬಸವರಾಜ ಬೆಳಕೂಡ, ರಮೇಶ ವಂಟಗೋಡಿ, ದೇವೇಂದ್ರ ಅರ್ಜುಣಗಿ, ಉಮೇಶ ಬೆಳಕೂಡ, ಈಶ್ವರ ಮುಗಳಖೋಡ, ಸದಾಶಿವ ಬೆಳಕೂಡ, ಈರಪ್ಪ ಚಿಪ್ಪಲಕಟ್ಟಿ ಸಹಿತ ಸಮಾಜದ ಹಿರಿಯರು ಉಪಸ್ಥಿತರಿದ್ದರು.

# ಓರಿಯೆಂಟಲ್ ಪೌಂಡೇಶನ್ ವತಿಯಿಂದ 103 ಸಾಧಕರಿಗೆ ಪ್ರಶಸ್ತಿ ಪ್ರಧಾನ ರವಿಕುಮಾರ

**ಬೆಂಗಳೂರ :** ಓರಿಯೆಂಟಲ್ ಪೌಂಡೇಶನ (ರಿ) ಕನ್ನಡ ಸಾಹಿತ್ಯ ಪರಿಷತ್ 2024-25 ನೇ ಸಾಲಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಒಟ್ಟು 103 ಸಾಧಕರಿಗೆ ಇಂಡಿಯನ್ ಐಕಾನ ಅವಾರ್ಡ್ ಪ್ರಶಸ್ತಿ ಪ್ರಧಾನ ಸಮಾರಂಭವು ದಿ 15 ರವಿವಾರದಂದು ಬೆಂಗಳೂರ



ಕನ್ನಡ ಸಾಹಿತ್ಯ ಪರಿಷತ್ ಪಂಪ ಮಹಾಕವಿ ರಸ್ತೆ ಚಾಮರಾಜಪೇಟೆ ಬೆಂಗಳೂರು ಕೃಷ್ಣ ರಾಜ ಪರಿಷತ್ ಮಂದಿರದಲ್ಲಿ ಪ್ರಶಸ್ತಿ ಪ್ರಧಾನ ಸಮಾರಂಭವು ಜರುಗುವುದು.

ಕಾರ್ಯಕ್ರಮದ ಮುಖ್ಯ ಅಥಿ-ತಿಗಳಾದ ಚಲನ ಚಿತ್ರ ನಟ ರಾಮಕೃಷ್ಣ, ಚಲನಚಿತ್ರ ನಟಿ ಅಭಿನಯ, ರಂಗಭೂಮಿ ಕಲಾವಿದೆ ಚಿತ್ರನಟಿ ಡಾ ಕಮನಿದರನ್, ಜೀ ಕನ್ನಡದ ಖ್ಯಾತ ನಿರೂಪಕ ಮಾಸ್ಟರ್ ಆನಂದ ಇವರ ಅಧ್ಯಕ್ಷತೆಯಲ್ಲಿ ಜರುಗುವುದು ಎಂದು ಓರಿಯೆಂಟಲ್ ಪೌಂಡೇಶನ್ ಸಂಸ್ಥಾಪಕ ರವಿಕುಮಾರ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

# ಅಂತಾರಾಷ್ಟ್ರೀಯ ಯೋಗ ದಿನ ಪೂರ್ವಭಾವಿ ಕಾರ್ಯಕ್ರಮ





**ಬೆಂಗಳೂರು :** 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ-2025ಕ್ಕೆ ಮುಂಚಿತವಾಗಿ, ಬೆಂಗಳೂರಿನ ಕೇಂದ್ರ ಸಂವಹನ ಇಲಾಖೆಯು ಬ್ರಹ್ಮಕುಮಾರಿ ಸಂಸ್ಥೆಯ ಸಹಯೋಗದೊಂದಿಗೆ ಜೂನ್ 15, 2025 ರಂದು ಬೆಂಗಳೂರಿನ ಗೊಟ್ಟಿಗೆರೆಯ ರಾಜಯೋಗ ಭವನದಲ್ಲಿ ಸಾಮೂಹಿಕ ಯೋಗ ಕಾರ್ಯಕ್ರಮವನ್ನು ಆಯೋಜಿಸಿತು. ಈ ಕಾರ್ಯಕ್ರಮದಲ್ಲಿ 1000 ಕ್ಕೂ ಹೆಚ್ಚು ಯೋಗ ಉತ್ಸಾಹಿಗಳು ಭಾಗವಹಿಸಿದರು, ಮಕ್ಕಳಿಂದ ಹಿರಿಯರವರೆಗೆ ಎಲ್ಲಾ ವಯಸ್ಸಿನ ಯೋಗಾಭ್ಯಾಸಿಗಳು ಯೋಗವನ್ನು ಪ್ರದರ್ಶಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಬ್ರಹ್ಮಕುಮಾರಿಯವಿವಿಪುರಂಉಪವಲಯ ಅಧ್ಯಕ್ಷರಾದ ಸೋದರಿ ರಾಜಯೋಗಿನಿ ಬಿ.ಕೆ. ಅಂಬಿಕಾ ಅವರು, ಅಂತಾರಾಷ್ಟ್ರೀಯ ಯೋಗ ದಿನವನ್ನು ಭಾರತದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲಿಯೂ ಬಹಳ ಉತ್ಸಾಹದಿಂದ ಆಚರಿಸಲಾಗುತ್ತಿದೆ ಎಂದು ಹೇಳಿದರು.

ಯೋಗ ದಿನ ಮತ್ತು ಯೋಗ ಆಸನಗಳ ಅಭ್ಯಾಸವು ಕೇವಲ ಒಂದು ದಿನಕ್ಕೆ ಸೀಮಿತವಾಗಿರಬಾರದು, ನಮ್ಮ ಸರ್ವತೋಮುಖ ಅಭಿವೃದ್ಧಿಗಾಗಿ ಜೀವನದುದ್ದಕ್ಕೂ ಸಹಜವಾಗಿ ಅಳವಡಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಆರೋಗ್ಯಕ್ಕಾಗಿ ಯೋಗದ ಮಹತ್ವವನ್ನು ಅವರು ಒತ್ತಿ ಹೇಳಿದರು.

"ಯೋಗ ಮತ್ತು ರಾಜಯೋಗ ಧ್ಯಾನದ ಮೂಲಕ ಅನೇಕ ಸಮಸ್ಯೆಗಳನ್ನು ಪರಿಹರಿಸಬಹುದು" ಎಂದು ಅವರು ಹೇಳಿದರು.

ಬೆಂಗಳೂರಿನ ಲಾಲ್ ಬಾಗ್ ನಲ್ಲಿರುವ ಶಂಕರ ಯೋಗ ಕೇಂದ್ರದ ಯೋಗ ಮಾಸ್ಟರ್ ಕೆ ಎ ಶಂಕರ್ ಮಾತನಾಡಿ, "ನಾನು ಸುಮಾರು 43ವರ್ಷಗಳಿಂದಯೋಗ, ಧ್ಯಾನ ಮತ್ತು ಪ್ರಾಣಾಯಾಮವನ್ನು ಉಚಿತವಾಗಿ ಕಲಿಸುತ್ತಿದ್ದೇನೆ. ದೈಹಿಕ ವ್ಯಾಯಾಮವು ಸ್ನಾಯುಗಳನ್ನು ಬಲಪಡಿಸಬಹುದು ಮತ್ತು ತ್ರಾಣವನ್ನು ಹೆಚ್ಚಿಸಬಹುದು, ಆದರೆ ಯೋಗವು ವ್ಯಕ್ತಿಯ ಒಟ್ಟಾರೆ ಯೋಗಕ್ಷೇಮವನ್ನು ಖಚಿತಪಡಿಸುತ್ತದೆ" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಕೇಂದ್ರ ಸಂವಹನ ಇಲಾಖೆಯ ಸಿಬ್ಬಂದಿ, ಬೆಂಗಳೂರಿನ ಬ್ರಹ್ಮಕುಮಾರಿ ಸಂಸ್ಥೆಯ ಸದಸ್ಯರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

# ಪೋಲೀಸ್ ಆಯುಕ್ತ ದಯಾನಂದ್ ರವರ ಅಮಾನತ್ ಆದೇಶವನ್ನು ಇಂಪಾಡಿಯ ವರಿಗೆ ಹೋರಾಟ ನಿಲ್ಲದು ವಾಲ್ಮೀಕಿ ಅಧ್ಯಕ್ಷ ಸುರೇಶ್




**ಕೂಡ್ಲಿಗಿ :** ವಾಲ್ಮೀಕಿ ಸಮುದಾಯದ ದಕ್ಷ, ಪ್ರಾಮಾಣಿಕ ಅಧಿಕಾರಿ ಬೆಂಗಳೂರು ನಗರ ಪೋಲಿಸ್ ಆಯುಕ್ತ ಬಿ.ದಯಾನಂದ ಅವರ ಅಮಾನತ್ತು ಆದೇಶವನ್ನು ಹಿಂಪಡೆಯಬೇಕು ಎಂದು ಅಖಿಲ ಭಾರತ ವಾಲ್ಮೀಕಿ ಮಹಾಸಭಾ ತಾಲೂಕು ಘಟಕದ ವತಿಯಿಂದ ಸೋಮವಾರ ತಹಸೀಲ್ದಾರ್ ವಿ. ಕೆ.ನೇತ್ರಾವತಿ ಮೂಲಕ ಮುಖ್ಯಮಂತ್ರಿ ಗೆ ಮನವಿ ಸಲ್ಲಿಸಿದರು. ಈ ಸಂಧರ್ಭದಲ್ಲಿ ವಾಲ್ಮೀಕಿ ಸಮಾಜದ ತಾಲೂಕು ಅಧ್ಯಕ್ಷ ಸುರೇಶ್ ಮಾತನಾಡಿ,

ಇದೇ 4 ರಂದು ಬೆಂಗಳೂರು ನಗರದಲ್ಲಿ ಆರ್ ಸಿಬಿ ಕ್ರಿಕೆಟ್ ವಿಜಯೋತ್ಸವದ ವೇಳೆ ಕಾಲ್ತುಳಿವಾಗಿ 11 ಜನ ಮೃತಪಟ್ಟ ಹಿನ್ನೆಲೆಯಲ್ಲಿ ಸರ್ಕಾರ ವಾಲ್ಮೀಕಿ ಸಮುದಾಯದ ದಕ್ಷ, ಪ್ರಾಮಾಣಿಕ ಅಧಿಕಾರಿ ಬಿ.ದಯಾನಂದ ಅವರು ಸೇರಿದಂತೆ ಇತರೆ ಅಧಿಕಾರಿಗಳನ್ನು ಅಮಾನತ್ತು ಮಾಡಿದ್ದು, ಇದನ್ನು ವಾಲ್ಮೀಕಿ ಸಮಾಜ ತೀವ್ರವಾಗಿ ಖಂಡಿಸುತ್ತದೆ. ಸರ್ಕಾರ ಈಗಲೇ ಎಚ್ಚೆತ್ತುಕೊಂಡು ದಕ್ಷ ಅಧಿಕಾರಿಗಳ ಅಮಾನತ್ತು ಆದೇಶ ಹಿಂಪಡೆಯಬೇಕು, ಆದೇಶ ಹಿಂಪಡೆಯದಿದ್ದರೆ, ರಾಜ್ಯಾದ್ಯಂತ ವಾಲ್ಮೀಕಿ ಸಮುದಾಯದ ಅನೇಕ ಸಂಘಟನೆಗಳು ಬೀದಿಗಿಳಿದು ಬೃಹತ್ ಹೋರಾಟ ಮಾಡಬೇಕಾಗುತ್ತದೆ. ಆ ಸಂಧರ್ಭದಲ್ಲಿ ಆಗುವ ಅನಾಹುತಗಳಿಗೆ ನೇರವಾಗಿ ಕಾಂಗ್ರೆಸ್ ಸರ್ಕಾರವೇ ಹೊಣೆಯಾಗುತ್ತದೆ. ಆದ್ದರಿಂದ ಸರ್ಕಾರ ಎಚ್ಚೆತ್ತು ಕೂಡಲೇ ನಗರ ಪೋಲಿಸ್ ಆಯುಕ್ತ ದಯಾನಂದ ಸೇರಿದಂತೆ ಇತರೆ ಅಧಿಕಾರಿಗಳ ಅಮಾನತ್ತು ಆದೇಶ ಹಿಂಪಡೆಯಬೇಕು ಎಂದು ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ತಹಸೀಲ್ದಾರ್ ವಿ.ಕೆ.ನೇತ್ರಾವತಿ ಮನವಿ ಸ್ವೀಕರಿಸಿದರು. ಪಪಂ ಸದಸ್ಯ ಕೆ.ಈಶಪ್ಪ, ವಾಲ್ಮೀಕಿ ಹಿರಿಯ ಮುಖಂಡ ಸಿರಬಿ ಅಂಜಿನಪ್ಪ, ಡಿಎಸ್ಎಸ್ ಜಿಲ್ಲಾ ಸಂಚಾಲಕ ಎಸ್.ದುರುಗೇಶ್, ಸಿಪಿಐ ಜಿಲ್ಲಾ ಕಾರ್ಯದರ್ಶಿ ಎಚ್.ವೀರಣ್ಣ, ಢಾಣಿ ರಾಘವೇಂದ್ರ, ಉಗ್ರೇಶ್, ನೀರ್ಕಲ್ ಅಜೇಯ, ಸೊಲ್ಲೇಶ್, ಗುರಿಕಾರ ರಾಘವೇಂದ್ರ, ಸಕ್ರಪ್ಪ, ಕಾಶೀನಾಥ್, ಕೆ.ಕೆ.ಹಟ್ಟಿ ರಮೇಶ್, ಕುಪ್ಪಿನಕೆರೆ ಕರಿಬಸಪ್ಪ ಸೇರಿದಂತೆ ಅನೇಕರು ಇದ್ದರು.

# ಗರ್ಭಿಣಿಯರಿಗೆ ಅವಧಿ ಮೀರಿದ ಕಳಪೆ ಆಹಾರ ಸಾಮಗ್ರಿ ವಿತರಣೆ

**ಮಹಾಲಿಂಗಪುರ:**ಪಟ್ಟಣದಬಸವ ನಗರ ವ್ಯಾಪ್ತಿಯ ಮಹಾಂತೇಶ ನಗರದ ಕಂಪೌಂಡಿಗೆ ಹೊಂದಿಕೊಂಡಿರುವ ಅಂಗನವಾಡಿ ಕೇಂದ್ರದ (102) ಶಿಕ್ಷಕಿಯು ಕಳೆದ 2025 ನೆಯ ಏಪ್ರೀಲ್ ತಿಂಗಳಿನಲ್ಲಿಯೇ ಅವಧಿ ಮೀರಿರುವ ಆಹಾರ ಸಾಮಗ್ರಿಗಳನ್ನು ಗರ್ಭಿಣಿಯರಿಗೆ ವಿತರಿಸಿ ಯಡವಟ್ಟು ಮಾಡಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ.





ಸಣ್ಣಮಕ್ಕಳುಮತ್ತುಗರ್ಭಿಣಿಯರ ಆರೋಗ್ಯ ರಕ್ಷಣೆಗಾಗಿ ಸರ್ಕಾರವು ಕೋಟ್ಯಾಂತರ ಹಣವನ್ನು ಖರ್ಚು ಮಾಡಿ ಪೌಷ್ಟಿಕ ಆಹಾರ ನೀಡುತ್ತಿದೆ. ಆದರೆ ಅದು ಸರಿಯಾಗಿ ವಿತರಣೆಯಾಗುತ್ತಿಲ್ಲ. ವಿತರಣೆಯಾದರೂ ಈ ರೀತಿ ಅವಧಿ ಮೀ-ರಿದ ಆಹಾರ ಸಾಮಗ್ರಿಗಳು ವಿತರಣೆಯಾಗುತ್ತಿರುವ ಕಾರಣದಿಂದ ಚಿಕ್ಕಮಕ್ಕಳು ಮತ್ತು ಗರ್ಭಿಣಿ ಮಹಿಳೆಯರ ಆರೋಗ್ಯದಮೇಲೆದುಷ್ಪರಿಣಾಮ ಬೀರುತ್ತಿದೆಯಲ್ಲದೆಸಾವು ನೋವು ಕೂಡ ಸಂಭವಿಸುತ್ತಿರುವುದನ್ನು ಇಲ್ಲಿ ಸ್ಮರಿಸಬಹುದು.

ಹೀಗಾಗಿ ಎಲ್ಲ ಅಂಗನವಾಡಿಗಳಿಗೆ ಆಹಾರ ಪೂರೈಸುವ ಗುತ್ತಿಗೆದಾರರ ನಿರ್ಲಕ್ಷವೋ ? ಅಧಿಕಾ-ರಿಗಳ ಅಸಡ್ಡೆಯೋ ? ಆಹಾರ ಸಾಮಗ್ರಿಗಳನ್ನು ವಿತರಿಸಿದ ಶಿಕ್ಷಕಿಯಅಲಕ್ಷವೋ?ತಿಳಿಯುತ್ತಿಲ್ಲ ! ಮಹಾಲಿಂಗಪುರ ಪಟ್ಟಣದ ಕೆಲವೊಂದು ಅಂಗನವಾಡಿ ಕೇಂದ್ರಗಳಲ್ಲಿ ಅವಧಿ ಮೀರಿದ ಆಹಾರ ವಿತರಣೆ: ಮೊಟ್ಟೆಗಳನ್ನು ಸರಿಯಾಗಿ ವಿತರಿಸುತ್ತಿಲ್ಲ. ಅಕಸ್ಮಾತ್ ವಿತರಿಸಿದರೂ ಕೊಳೆತ ಮೊಟ್ಟೆಗಳನ್ನು ವಿತರಿಸಲಾಗುತ್ತಿದೆ. ಕಾಳು ಕಡಿಗಳು ಸರಿಯಾದ ತೂಕದಲ್ಲಿ ಇರುವದಿಲ್ಲ. ಸಂಬಂಧಿಸಿದ ಮೇಲಾಧಿಕಾ-ರಿಗಳು ಈ ಕುರಿತು ಸೂಕ್ತ ತನಿಖೆ ನಡೆಸಬೇಕೆಂದು ಪಟ್ಟಣದ ಸಾರ್ವಜನಿಕರು, ಗರ್ಭಿಣಿ ಮಹಿಳೆಯರು ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದ್ದಾರೆ.

## ವರದಿಯಾಧರಿಸಿ ಸೂಕ್ತಕ್ರಮ

**ಮಹಾಲಿಂಗಪುರ ಪಟ್ಟಣದ ಬಸವನಗರ ಅಂಗನವಾಡಿ ಕೇಂದ್ರದಲ್ಲಿ ಗರ್ಭಿಣಿ ಮಹಿಳೆಯರಿಗೆ ಏಪ್ರೀಲ್ ತಿಂಗಳಲ್ಲಿಯೇ ಅವಧಿ ಮುಗಿದ ಆಹಾರ ಪೊಟ್ಟಣಗಳನ್ನು ವಿತರಿಸಿದ ಮಾಹಿತಿ ನಮ್ಮ ಗಮನಕ್ಕೂ ಬಂದಿದೆ. ಈ ಕುರಿತು ಪರಿಶೀಲನೆ ನಡೆಸಿ ವರದಿ ನೀಡಲು ಮುಧೋಳ ಸಿಡಿಪಿಒ ಅವರಿಗೆ ಆದೇಶಿಸಲಾಗಿದೆ. ಸಿಡಿಪಿಒ ನೀಡುವ ವರದಿಯನ್ನಾಧರಿಸಿ ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳುತ್ತೇವೆ.**

। ಪ್ರಭಾಕರ ಕವಿತಾಳ. ಉಪನಿರ್ದೇಶಕರು, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬಾಗಲಕೋಟೆ

# "ಮಗುವಿನ ಪ್ರೀತಿ"

**ಸಿಹಿ ಕಹಿ ಸುದ್ದಿ,**

ಒಂದು ದಿನ ಚಂದ್ರನು ಆರು ವರ್ಷದ ಮಗುವಿನ
ಬಳಿ ಬಂದು
ಹೇ ಮಗುವೆ ಈ ಭೂಮಿಯ ಮೇಲೆ ನನಗಿಂತ
ಸುಂದರವಾಗಿರುವ ಯಾರನ್ನಾದರು ನೀನು
ನೋಡಿದ್ದೀಯಾ ಎಂದು ಕೇಳಿತು.
ಆಗ ಮಗು ಹೌದು ನೋಡಿದ್ದೇನೆ ದಿನವೂ
ನೋಡುತ್ತೇನೆ ಎಂದಿತು. ಚಂದ್ರ ಆಶ್ಚರ್ಯದಿಂದ
ಹೌದಾ ಹಾಗಾದರೆ ಯಾರು ಎಂದು ಕೇಳಿದಾಗ
ಅದು ಬೇರೆ ಯಾರು ಅಲ್ಲ ನನ್ನ ಅಮ್ಮ ಎಂದು
ಮಗು ಪ್ರೀತಿಯಿಂದ ಹೇಳಿತು.

**– ಶ್ರೀ ಮುತ್ತು ಯ.ವಡ್ಡರ**
**ಶಿಕ್ಷಕರು**
**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹಿರೇಮಳಗಾವಿ**
**9845568484**



**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618